ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 50 | ಡಿಸೆಂಬರ್ 14, 1980 | ಬೆಲೆ : 50 ಪೈಸೆ

ತುರ್ತುಪರಿಸ್ಥಿತಿ ಜಾರಿಗೆ ಸನ್ನಾಹ!

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಸಮಾವೇಶಗೊಂಡಾಗ ತುರ್ತುಪರಿಸ್ಥಿತಿ ಜಾರಿಗೆ ತರಬೇಕೆನ್ನುವ ಶ್ರುತಿ ಕೇಳಿಬಂದುದಾಗಿ ವರದಿಯಾಗಿದೆ. ಕಾಂಗ್ರೆಸ್‌ನ ಈ ಅಧಿವೇಶನದಲ್ಲಿ ಎಲ್ಲ ವಿರೋಧಪಕ್ಷಗಳನ್ನು ಹೀನಾಮಾನವಾಗಿ ತೆಗಳಲಾಯಿತು. ಎಡರಂಗ ಸರಕಾರಗಳಿರುವ ಬಂಗಾಳ, ತ್ರಿಪುರ, ಮತ್ತು ಎಡ ಮತ್ತು ಪ್ರಜಾಪ್ರಭುತ್ವ ಸರಕಾರವಿರುವ ಕೇರಳ ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂಬ ಕೂಗು ಇವರದು.

ಇಂದಿರಾ ಕಾಂಗ್ರೆಸ್ ಆಡಳಿತ ನಡೆಸುವ ಬಿಹಾರದಲ್ಲಿ ಕಾನೂನು ಪಾಲಕ ಪೋಲೀಸರೇ ಸ್ವಯಂ ಕೆಲವು ಅಪಾದಿತರ ಕಣ್ಣು ಕಿತ್ತಿದ್ದರೂ ಅಲ್ಲಿ ಮಾತ್ರ ಕಾನೂನು ವ್ಯವಸ್ಥೆ ಸರಿಯಾಗಿದೆ ಎಂಬುದು ಕಾಂಗ್ರೆಸ್‌ನವರ ಲೆಕ್ಕ. ಉತ್ತರಪ್ರದೇಶ ಮತ್ತಿತರ ಕಡೆ ನಡೆಯುತ್ತಿರುವ ದರೋಡೆ, ಕಗ್ಗೊಲೆ, ಹರಿಜನರ ಮೇಲಿನ ಹಲ್ಲೆ, ಮೊರಾದಾಬಾದ್ ಮುಂತಾದ ಕಡೆ ಪೋಲೀಸರೇ ಕೋಮುಗಲಭೆ ಉಂಟುಮಾಡಲೆತ್ನಿಸಿದ್ದು ಎಲ್ಲ ಇವರ ಕಾನೂನು ಪರಿಪಾಲನೆಯ ವೈಖರಿ.

ಸಂಪಾದಕೀಯ

ದಿನದಿಂದ ದಿನಕ್ಕೆ ವಿಷದಂತೆ ಏರುತ್ತಿರುವ ಬೆಲೆಗಳಿಗೆ ಕಡಿವಾಣ ಹಾಕುವ ಬಗ್ಗೆಯಾಗಲೀ, ನ್ಯಾಯವಾದ ಬೆಲೆಗಳು ದೊರೆಯಬೇಕೆಂಬ ಬೇಡಿಕೆಯೊಂದಿಗೆ ದೇಶಾದ್ಯಂತ ವ್ಯಾಪಿಸಿರುವ ರೈತಚಳುವಳಿಯ ಬಗ್ಗೆಯಾಗಲೀ ವಿಶ್ಲೇಷಣೆ ನಡೆಸದೇ ಇರುವುದು ದುರಾದೃಷ್ಟಕರವಾದುದು.


ಹಿಂದೊಮ್ಮೆ 75ರಲ್ಲಿ, ಪ್ರಜಾಸತ್ತೆ ಗಂಡಾಂತರದಲ್ಲಿದೆ ಎಂದು ನೆಪಮಾಡಿ ಆಂತರಿಕ ತುರ್ತುಪರಿಸ್ಥಿತಿ ಜಾರಿಗೆ ತಂದು ಜನರ ಹಕ್ಕುಗಳನ್ನು ಕಿತ್ತುಕೊಳ್ಳುವುದಕ್ಕೆ ಮುಂಚೆ ಇಂದಿರಾ ಪಕ್ಷದವರು "ಪ್ರಜಾಪ್ರಭುತ್ವ ಉಳಿಸಿ" ಎಂದು ಪ್ರಕ್ಷೋಬೆ ನಡೆಸಿದರು. ಈ ಪ್ರಕ್ಷೋಬೆಯ ಅಂಗವಾಗಿ ಪಾಟ್ನಾದಲ್ಲಿ ಅಂತರಾಷ್ಟ್ರೀಯ ಸಮ್ಮೇಳನ ನಡೆಸಿದರು. ಅಂದು ಇಂದಿರಾ ಜೊತೆಗಿದ್ದವರು ಇಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತಿತರ ಎಡ ಪ್ರಜಾಪ್ರಭುತ್ವ ಪಕ್ಷಗಳೊಂದಿಗಿದ್ದಾರೆ.

ಇಂದಿರಾ ಕಾಂಗ್ರೆಸ್‌ನವರು 75ರ ಕಾಲಘಟ್ಟದಲ್ಲಿ ಆರ್.ಎಸ್.ಎಸ್., ಜಮಾಯತೆ-ಇಸ್ಲಾಮ್ ಮತ್ತು ನಕ್ಸಲೀಯರನ್ನು ಗುರಿಮಾಡಿ

(ಕಡೇ ಪುಟ ನೋಡಿ)

ಅಧ್ಯಕ್ಷೀಯ ಪದ್ಧತಿ : ಇಂದಿರಾಗೆ ಇ. ಎಂ. ಎಸ್. ಎಚ್ಚರಿಕೆ

ರಾಷ್ಟ್ರದಲ್ಲಿರುವ ಪ್ರಸಕ್ತ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬದಲಾಯಿಸಿ ಅಧ್ಯಕ್ಷೀಯ ಮಾದರಿ ವ್ಯವಸ್ಥೆಯನ್ನು ತರಲು ಪ್ರಯತ್ನಿಸಿದಲ್ಲಿ ಬಂಗ್ಲಾದೇಶದ ಮಾಜಿ ಅಧ್ಯಕ್ಷ ಮುಜಿಬುರ್ ರಹಮಾನ್ ಅವರಿಗೆ ಒದಗಿದ ಗತಿಯೇ ನಿಮಗೂ ಒದಗೀತೆಂಬ ಕಟು ಎಚ್ಚರಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್ ನಂಬೂದಿರಿಪಾದ್ ಅವರು ಕಾಂಗ್ರೆಸ್ ಅಧ್ಯಕ್ಷೆ ಹಾಗೂ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಇತ್ತಿದ್ದಾರೆ.



ಕೊಚ್ಚಿನ್‌ನಲ್ಲಿ ನಡೆದ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆಯಲ್ಲಿ ಪಾಲ್ಗೊಂಡು ಕಲ್ಕತ್ತಾಕ್ಕೆ ವಾಪಸಾಗುವ ಮಾರ್ಗದಲ್ಲಿ ಬೆಂಗಳೂರಿನಲ್ಲಿ ಸ್ವಲ್ಪ ಕಾಲ ತಂಗಿದ್ದ ಕಾಂ. ಇ. ಎಂ. ಎಸ್. ಅವರು ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಸಿ.ಪಿ.ಐ (ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಬಸವಪುನ್ನಯ್ಯ ಅವರೂ ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದರು.

ನಮ್ಮ ದೇಶದ ಸುತ್ತಮುತ್ತ ಇರುವ ಬಂಗ್ಲಾದೇಶ, ಪಾಕೀಸ್ತಾನ ಮತ್ತು ಶ್ರೀಲಂಕಾಗಳಲ್ಲಿ ಪಾರ್ಲಿಮೆಂಟರಿ ಪದ್ಧತಿಯನ್ನು ಕಿತ್ತುಹಾಕಿ ಅಧ್ಯಕ್ಷೀಯ ವ್ಯವಸ್ಥೆ ಮತ್ತು ಮಿಲಿ

(ಕಡೇ ಪುಟ ನೋಡಿ)

ಬ್ರೆಜ್ನೇವ್ ಭೇಟಿಯಿಂದ ಸ್ನೇಹ ಬಲವರ್ಧನೆ

ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯೂ, ಒಕ್ಕೂಟದ ಪ್ರಧಾನ ಸೋವಿಯೆತ್‌ನ ಪ್ರಿಸೀಡಿಯಂನ ಅಧ್ಯಕ್ಷರೂ ಆಗಿರುವ ಕಾಮ್ರೇಡ್ ಎಲ್. ಐ. ಬ್ರೆಜ್ನೇವ್‌ರವರು ನಾಲ್ಕು ದಿನಗಳ ಭೇಟಿಯ ನಂತರ ಡಿಸೆಂಬರ್ ೧೧ರಂದು ಭಾರತದಿಂದ ವಾಪಸಾಗಿದ್ದಾರೆ.

ಏಳು ವರ್ಷಗಳ ನಂತರ ಮತ್ತೆ ಬಂದಿರುವ ಲಿಯೋನಿಡ್ ಬ್ರೆಜ್ನೇವರ ಈ ಭೇಟಿಯು ಎರಡು ದೇಶಗಳ ಪರಸ್ಪರ ಸಹಕಾರ, ಸ್ನೇಹಗಳಿಗೆ ಹೊಸ ಹುರುಪನ್ನು ತಂದಿದೆ.

ರಾಜಕೀಯ ಸ್ವಾತಂತ್ರ್ಯವನ್ನು ಪಡೆದನಂತರ ಭಾರತವು ಕೈಗಾರಿಕೆಯ ಹಾದಿಯನ್ನು ತುಳಿಯಲು ಯಾವ ಸಹಾಯವನ್ನೂ ಸಾಮ್ರಾಜ್ಯಶಾಹಿಗಳು ಕೊಡಲು ಇಷ್ಟಪಡದಿದ್ದಾಗ ಭಾರತ-ಸೋವಿಯೆತ್ ಒಕ್ಕೂಟಗಳ ಸಹಕಾರವು, ಸಾಮ್ರಾಜ್ಯಶಾಹಿ ಆಟವನ್ನು ಮುರಿದು, ಖಾಸಗಿ ವಲಯದಲ್ಲಿ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಹಾಯ ಮಾಡಿತು. ಇದರಲ್ಲಿ ಭಿಲಾಯ್ ಸ್ಟೀಲ್ ಪ್ಲಾಂಟ್ ಮುಖ್ಯವಾದದ್ದು. ಅಂದಿನಿಂದ ಇಂದಿನವರೆಗೆ ಭಾರತಕ್ಕೆ ಸೋವಿಯೆತ್‌ನ ಸಹಾಯ ತುಂಬ ದೊರೆತಿದ್ದು, ಅನೇಕ ಕೈಗಾರಿಕೆಗಳು ಇದರಿಂದ ಬೆಳೆದಿವೆ. ಸುಮಾರು ಎಪ್ಪತ್ತು ಕೈಗಾರಿಕೆಗಳು ಸೋವಿಯೆತ್ ಸಹಕಾರದಿಂದ ಕೈಗೂಡಿವೆ.

ವ್ಯವಸಾಯದಲ್ಲಿಯೂ ಕೂಡ ಸೋವಿಯೆತ್ ಸಹಾಯ ದೊರೆತಿದ್ದು, ಕೃಷಿವಿಧಾನಗಳ ಆಧುನೀಕರಣ, ಸೂರತ್‌ಗರ್ ಮತ್ತು ಜೆಟ್ಸರ್‌ಗಳಲ್ಲಿ ದೇಶದ ಒಡೆತನದ ಫಾರಂಗಳ ಸ್ಥಾಪನೆ ಇವುಗಳು ಸಾಧ್ಯವಾಗಿವೆ. ಸೋವಿಯೆತ್ ಸಹಾಯದಿಂದ ನಾಲ್ಕು ಬೀಜಗಳ ಫಾರಂ ತೆಗೆಯಲಾಗಿದೆ.

ಭಾರತ-ಸೋವಿಯೆತ್ ವ್ಯಾಪಾರವೂ ಕೂಡಾ ತುಂಬ ಬೆಳೆಯುತ್ತಿದ್ದು, ಭಾರತ ಅದರ ಒಂದು ಪ್ರಮುಖ ವ್ಯಾಪಾರ ಸಹಭಾಗಿಯಾಗಿದೆ. ಭಾರತದ ಆರ್ಥಿಕತೆಯ ಬೆಳವಣಿಗೆಯಿಂದ, ಸೋವಿಯೆತ್ ಒಕ್ಕೂಟವು ಭಾರತದಿಂದ, ತಯಾರಾದ ವಸ್ತುಗಳನ್ನು ಕೊಳ್ಳುತ್ತಿದೆ. ಕೇಬಲ್‌ಗಳು, ಉಲ್ಲನ್ ಹೆಣಿಗೆ ವಸ್ತುಗಳು, ಸಿದ್ಧಪಡಿಸಿದ ಉಡುಪುಗಳು, ಸಿಗರೇಟ್‌ಗಳು, ಗೋಡಂಬಿ, ತಂಬಾಕು, ಎಣ್ಣೆಬೀಜಗಳು, ಚರ್ಮ, ಚರ್ಮದ ವಸ್ತುಗಳು ರಫ್ತಾಗುತ್ತಿವೆ.



ದೇಶದ ರಕ್ಷಣಾಬಲವನ್ನು ಹೆಚ್ಚಿಸುವುದರಲ್ಲೂ ಸೋವಿಯೆತ್ ಸಹಕಾರ ಬಹಳ ಸಿಕ್ಕಿದೆ. ಬಾಹ್ಯಾಕಾಶ ತಾಂತ್ರಿಕತೆಯಲ್ಲಿಯೂ ಸಹ ತುಂಬ ಪ್ರಮುಖ ಸಹಾಯವನ್ನು ಭಾರತ ಪಡೆದಿದೆ. 1973ರಲ್ಲಿ ಬ್ರೆಜ್ನೇವರು ಭಾರತಕ್ಕೆ ಬಂದಿದ್ದಾಗ ಆರ್ಥಿಕ ಮತ್ತು ವಾಣಿಜ್ಯ ಸಹಕಾರದ ಹದಿನೈದು ವರ್ಷಗಳ ಒಪ್ಪಂದಕ್ಕೆ ಸಹಿಹಾಕಲಾಗಿತ್ತು. ಎರಡು ದೇಶಗಳ ಯೋಜನಾಂಗಗಳ ಸಂಬಂಧಗಳನ್ನು ಸ್ಥಾಪಿಸಲಾಗಿತ್ತು. ಇದಕ್ಕೆ ಪೂರಕವಾಗಿ 1979ರ ಮಾರ್ಚಿಯಲ್ಲಿ ಆರ್ಥಿಕ, ವಾಣಿಜ್ಯ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರದಿಂದ ದೀರ್ಘಕಾಲದ ಒಪ್ಪಂದವನ್ನು ರೂಪಿಸಲಾಯಿತು. ಈ ಸಹಕಾರಗಳು ಬ್ರೆಜ್ನೇವರ ಈ ಭೇಟಿಯಿಂದ ಮತ್ತಷ್ಟು ಹೆಚ್ಚಲಿವೆ.

ಈ ಭೇಟಿಯು ರಾಜಕೀಯವಾಗಿಯೂ ವಿಶಿಷ್ಟವಾದುದಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿಯು ತೀವ್ರವಾಗಿ ಹದಗೆಡುತ್ತಿರುವುದರ ಹಿನ್ನೆಲೆಯಲ್ಲಿ ಈ ಭೇಟಿ ನಡೆಯುತ್ತಿದೆ. ಜಗತ್ತಿನ ಎಲ್ಲ ಭಾಗಗಳಲ್ಲಿ ಸಾಮ್ರಾಜ್ಯಶಾಹಿಗಳು, ಅದರಲ್ಲೂ ಅಮೆರಿಕ ಸಾಮ್ರಾಜ್ಯಶಾಹಿಗಳು ಅಂತಕಗಳನ್ನು ಹುಟ್ಟಿಸುತ್ತಿದ್ದಾರೆ. ತಮ್ಮ ಲಾಭಕ್ಕಾಗಿ ಸಾಲ್ಟ್ II ಒಪ್ಪಂದವನ್ನು ಮತ್ತೆ ಸಂಧಾನ ಮಾಡಬೇಕೆಂದು ರೇಗನ್ ಕೇಳುತ್ತಿದ್ದಾರೆ. ಅಮೆರಿಕ ಅಣುಶಸ್ತ್ರಗಳನ್ನು ಜಮಾಯಿಸುತ್ತಿದೆ. ಪ. ಏಷ್ಯಾದಲ್ಲಿ ಇಸ್ರೇಲ್‌ಪರ ಒಪ್ಪಂದ ಹೇರಲು ಅದು ಪ್ರಯತ್ನಿಸುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ತೀವ್ರ ಪರಿಸ್ಥಿತಿಯನ್ನು ರೂಪಿಸುತ್ತಿದೆ. ಅಫ್‌ಘಾನಿಸ್ತಾನದಲ್ಲಿ ಸೋವಿಯೆತ್ ವಿರೋಧಿ ಸರ್ಕಾರವನ್ನು ತರಲು ಸಂಚು ನಡೆಸುತ್ತಿದೆ. ವಿಶ್ವದ ಶಾಂತಿಗೆ ಅಮೆರಿಕ ತೀವ್ರಧಕ್ಕೆ ತರುತ್ತಿದೆ.

ಅಮೆರಿಕದ ಮಿಲಿಟರಿ ಸಾಹಸಗಳಿಗೆ ಏಷ್ಯಾ ಅಪಾಯಕಾರಿ ಪ್ರದೇಶವಾಗುತ್ತಿದೆ. ಒಪ್ಪಂದವನ್ನು ಮುರಿದು ಅಮೆರಿಕ ಸಾಮ್ರಾಜ್ಯಶಾಹಿಗಳು ಹಿಂದೂಮಹಾಸಾಗರದಲ್ಲಿ ಮಿಲಿಟರಿ ನೆಲೆ ರೂಪಿಸುತ್ತಿದ್ದಾರೆ.

ಸ್ವಾತಂತ್ರ್ಯಾನಂತರದಲ್ಲಿ ಭಾರತಕ್ಕೆ ಬಿಕ್ಕಟ್ಟು ಒದಗಿದಾಗೆಲ್ಲ ಸೋವಿಯೆತ್ ಒಕ್ಕೂಟ ಸಹಾಯ ಮಾಡಿದೆ. ಆದರೆ ಕಾಶ್ಮೀರದ ಬಗ್ಗೆ ಸೋವಿಯೆತ್‌ನ ನಿಲುವು ಈಗಿರುವ ಹಾಗಿಲ್ಲದೆ ಬೇರೆಯಾಗಿದ್ದಿದ್ದರೆ ಉಪಖಂಡದ ಪರಿಸ್ಥಿತಿಯೇ ಬೇರೆಯಾಗಿರುತ್ತಿತ್ತು. ಗೋವವನ್ನು ವಶಪಡಿಸಿಕೊಂಡಾಗ ಅಮೆರಿಕ ಖಂಡಿಸಿದರೂ ಸೋವಿಯೆತ್

(ಕಡೇ ಪುಟ ನೋಡಿ)

ಬಿಜಾಪುರ ಜಿಲ್ಲೆ ಬರಗಾಲ ಪ್ರದೇಶವೆಂದು ಸಾರಲು ವಿರೋಧಿ ಪಕ್ಷಗಳ ಪ್ರಚಂಡ ಮತಪ್ರದರ್ಶನ

ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್ ಅವರು ತಾ. 28 ರಂದು ಬಿಜಾಪುರಕ್ಕೆ ಬಂದಾಗ ಸಿ.ಪಿ.ಎಂ., ಸಿ.ಪಿ.ಐ., ಜನತಾ, ಅರಸ್ ಕಾಂಗ್ರೆಸ್, ವಿದ್ಯಾರ್ಥಿ ಫೆಡರೇಶನ್, ರೈತಸಂಘ, ಆರ್.ಪಿ.ಐ., ನೂಲಿನ ಗಿರಣಿ ಕಾರ್ಮಿಕ ಸಂಘದವರೆಲ್ಲ ಪ್ರಚಂಡ ಮತಪ್ರದರ್ಶನವನ್ನೇರ್ಪಡಿಸಿ, ಬರಗಾಲ ಕಾಮಗಾರಿಗಾಗಿ ಒಂದೂವರೆ ಕೋಟಿ ರೂಪಾಯಿ ಮಂಜೂರ ಮಾಡಿಸಿಕೊಂಡು ಸಂಘಟನಾ ಶಕ್ತಿ ತೋರಿಸಿದರು. ಹಗಲೆಲ್ಲ ಬರಗಾಲಕ್ಕೆ ತುತ್ತಾಗುತ್ತಿರುವ ಬಿಜಾಪುರ ಜಿಲ್ಲೆಗೆ ಖಾಯಂ ರೀತಿಯ ಪರಿಹಾರ ಕಂಡುಹಿಡಿದು ಸರಕಾರಕ್ಕೆ ಸಲಹೆ ಮಾಡುವ ಸಲುವಾಗಿ ಉಚ್ಚ ಮಟ್ಟದ ಕಮಿಟಿ ನೇಮಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕಾರ್ಯದರ್ಶಿ ಎನ್. ಕೆ. ಉಪಾಧ್ಯಾಯರು ಮಾಡಿದ ಸೂಚನೆಯನ್ನು ಮುಖ್ಯಮಂತ್ರಿಯವರು ಒಪ್ಪಿಕೊಂಡು ಹದಿನೈದು ದಿವಸದೊಳಗಾಗಿ ಅಂಥ ಕಮಿಟಿಯನ್ನು ನೇಮಿಸುವುದಾಗಿ ಜಾಹೀರಪಡಿಸಿದರು.

ಬರಗಾಲ ಪರಿಸ್ಥಿತಿ ಕುರಿತು ಸರಕಾರ ಮತ್ತು ಸಾರ್ವಜನಿಕರ ಗಮನ ಸೆಳೆಯುವ ಸಲುವಾಗಿ 28ರಂದು ಎಲ್ಲ ವಿರೋಧ ಪಕ್ಷಗಳ ಮುಖಂಡರೂ, ಕಾರ್ಯಕರ್ತರೂ ಬಸವೇಶ್ವರ ಚೌಕಿನಲ್ಲಿ ಒಂದು ದಿನದ ಧರಣಿ ನಡೆಸಿ ಸಾವಿರಾರು ಜನರ, ವಿದ್ಯಾರ್ಥಿಗಳ ಮೆರವಣಿಗೆ ತೆಗೆದುಕೊಂಡು ಮುಖ್ಯಮಂತ್ರಿಯವರು ಹೆಲಿಕಾಪ್ಟರಿನಲ್ಲಿ ಸೈನಿಕ ಸ್ಕೂಲಿನಲ್ಲಿಳಿದಾಗ ಮತಪ್ರದರ್ಶನ ಮಾಡಿದರು.

ಬರಗಾಲ ಪರಿಹಾರದ ಕುರಿತು ಚರ್ಚಿಸಲು ಕರೆದ ಆಳುವ ಪಕ್ಷದ ಮತ್ತು ವಿರೋಧಿ ಪಕ್ಷಗಳ ಮತ್ತು ಅಧಿಕಾರಿಗಳ ಸಭೆಯಲ್ಲಿ ಜನತಾಪಕ್ಷದ ಅಧ್ಯಕ್ಷ ನಾಗರೂಣ, ಮಾರ್ಕ್ಸಿಸ್ಟ್ ಪಾರ್ಟಿ ಮುಖಂಡ ಎನ್. ಕೆ. ಉಪಾಧ್ಯಾಯ, ರೈತಸಂಘದ ಅಧ್ಯಕ್ಷ ಭೀಮಸಿಕಲಾದಗಿಯವರು ತಮ್ಮ ಭಾಷಣದಲ್ಲಿ ಹಲವಾರು ಸೂಚನೆಗಳನ್ನು ಮಂಡಿಸಿ ಮನವಿಗಳನ್ನರ್ಪಿಸಿದರು. ತಾವು ಮಂಜೂರು ಮಾಡಿದ ಒಂದೂವರೆ ಕೋಟಿ ರೂಪಾಯಿಯ ಕೆಲಸಗಳು ಸರಿಯಾಗಿ ಕಾರ್ಯರೂಪದಲ್ಲಿ ಬರುವಂತೆ ವಿರೋಧಿ ಪಕ್ಷಗಳು ಮೇಲ್ವಿಚಾರಣೆ ನಡೆಸಬೇಕೆಂದೂ, ಸರಕಾರದ ಮಂಜೂರಿ ಸಲುವಾಗಿ ಯಾವುದೇ ಕೆಲಸವನ್ನೂ ತಡೆಹಿಡಿಯದೆ ಕೂಡಲೇ ಎಲ್ಲ ಕೆಲಸಗಳನ್ನು ಪ್ರಾರಂಭಿಸಬೇಕೆಂದು ಅಧಿಕಾರಿಗಳಿಗೆ ಶ್ರೀ ಗುಂಡೂರಾವ್ ಸೂಚನೆ ಮಾಡಿದರು. ವಿರೋಧಿ ಪಕ್ಷಗಳು ಒಗ್ಗಟ್ಟಾಗಿ ಹೋರಾಡಿದರೆ ಕೆಲವು ಸೌಲಭ್ಯಗಳನ್ನು ಜನರಿಗೆ ಕೊಡಿಸಬಹುದೆಂಬುದನ್ನು ಬಿಜಾಪುರದ ಈ ಐಕ್ಯ ಹೋರಾಟ ತೋರಿಸಿಕೊಟ್ಟಿದೆ.

ಈ ಮತಪ್ರದರ್ಶನದ ಮುಖಂಡತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಜಕ್ರಿಯಾಸಾಬ ಕಾಲೇಬಾಗ, ವಿ. ಎಂ. ಸೊನ್ನದ, ರೈತ ಸಂಘದ ಕಾರ್ಯದರ್ಶಿ ಹೊನ್ನಟಗಿ, ಸಿ.ಪಿ.ಐ.ಯ ಪ್ರಕಾಶ ಹಿಟ್ಟನಳ್ಳಿ, ಯರನಾಳ, ಬಾಬುರೆಡ್ಡಿ ತುಂಗಳ ಮೊದಲಾದವರು ಮುಖಂಡತ್ವ ವಹಿಸಿದ್ದರು.

ಸೈನಿಕ ಸ್ಕೂಲಿನಲ್ಲಿ ಮತಪ್ರದರ್ಶನ ಮಾಡುತ್ತಿದ್ದಾಗ, ಕೆಲವರು ಕಲ್ಲು ತೂರಿದರೆಂಬ ನೆವದಿಂದ ಪೋಲೀಸರು ಲಾಠಿಚಾರ್ಜು ಮಾಡಿದ್ದನ್ನು ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ಮುಖಂಡರು ಖಂಡಿಸಿದ್ದಾರೆ.

○

ರೈತ ಕಾರ್ಮಿಕರ ಬಹಿರಂಗ ಸಭೆ

ಸುಳ್ಯ ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ಗುತ್ತಿಗಾರಿನಲ್ಲಿ ರೈತ ಕಾರ್ಮಿಕರ ಬಹಿರಂಗ ಸಭೆಯನ್ನು ದಿನಾಂಕ 29-11-80ರಂದು ನಡೆಸಲಾಯಿತು. ರೈತಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ರೈತ ಮುಖಂಡರಾದ ಕಾಂ. ಬಾಲಕೃಷ್ಣ ಗೌಡರು ಸ್ವಾಗತಿಸಿದರು. ಅಧ್ಯಕ್ಷತೆಯನ್ನು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಮೋನಪ್ಪ ಗೌಡರು ವಹಿಸಿದ್ದರು.

ಸುಳ್ಯದ ರೈತಮುಖಂಡ ಕಾಂ. ಬಾಲಕೃಷ್ಣ ಬೈಪಾಡಿತ್ತಾಯ ಇವರು ಮಾತನಾಡುತ್ತಾ ಸರಕಾರದ ಪೊಳ್ಳು ಆಶ್ವಾಸನೆಗಳು ಹಾಗೂ ಕಾನೂನುಗಳಿಂದ ಬಡಜನತೆಗಾಗುತ್ತಿರುವ ಅನ್ಯಾಯವನ್ನು ವಿವರಿಸಿದರು. ಜಿಲ್ಲಾ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಜನಾರ್ಧನ ನಾಯಕರವರು ಮಾತನಾಡುತ್ತಾ ಗಗನಕ್ಕೇರುತ್ತಿರುವ ಬೆಲೆಗಳಿಂದ ಜನಸಾಮಾನ್ಯರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತಿರುವುದನ್ನು, ಬೆಳೆದ ಬೆಳೆಗೆ ನ್ಯಾಯಬೆಲೆ ಸಿಗದೇ ರೈತ ದಿವಾಳಿಯಾಗುತ್ತಿರುವ ಬಗ್ಗೆ ಹಾಗೂ ರಾಜ್ಯದ ನಾನಾಕಡೆ ನಡೆಯುತ್ತಿರುವ ರೈತಚಳುವಳಿಯ ಬಗ್ಗೆ ವಿವರಿಸಿದರು.

ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣಭಟ್ಟರು ಮಾತನಾಡುತ್ತಾ ಪ್ರಸಕ್ತ ರಾಜಕೀಯವನ್ನು ವಿವರಿಸಿದರು. ಸಭೆಯಲ್ಲಿ ಸುಳ್ಯತಾಲ್ಲೂಕು ಬೀಡಿಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಮೂಸಾರವರು ಭಾಗವಹಿಸಿದ್ದರು.

●

ಹಾಸ್ಟೆಲ್ ಆಡಳಿತ ವರ್ಗದ ದುರ್ವರ್ತನೆಯಿಂದ ಎಸ್. ಎಫ್. ಐ. ಕಾರ್ಯಕರ್ತನ ಸಾವು

ಬೆಂಗಳೂರು ನಗರ ಮಾಡಿಕಸ್ತೆಯಲ್ಲಿರುವ ಬಾಪೂಜಿ ಹೈಸ್ಕೂಲ್ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಹಾಗೂ ಎಸ್. ಎಫ್. ಐ. ನ ಸಕ್ರಿಯ ಕಾರ್ಯಕರ್ತ ಜಿ. ತಿಪ್ಪೇಸ್ವಾಮಿಯವರು ದಿನಾಂಕ 2-12-80 ರಂದು ಬೆಳಿಗ್ಗೆ 8 ಘಂಟೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಒಂದು ವಾರದಿಂದ ಅನಾರೋಗ್ಯದಿಂದ ನರಳುತ್ತಿದ್ದುದನ್ನು ವಿದ್ಯಾರ್ಥಿಗಳು ಹಾಸ್ಟೆಲ್ ವಾರ್ಡನ್ ಹಾಗೂ ಕಾರ್ಯದರ್ಶಿಯವರಿಗೆ ತಿಳಿಸಿದರೂ ಅವರ ನಿರ್ಲಕ್ಷದಿಂದ ವಿದ್ಯಾರ್ಥಿಯ ಆರೋಗ್ಯದತ್ತ ಯಾವುದೇ ಗಮನ ಹರಿಸಲಿಲ್ಲ. ತಿಪ್ಪೇಸ್ವಾಮಿಯ ಆರೋಗ್ಯ ದುಸ್ಥಿತಿಗೆ ಬಂದು ನಿಶಕ್ತನಾದನು. ಕೊನೆಗೆ ಸೋಮವಾರ ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಡಾಕ್ಟರ್‌ರು ತಿಪ್ಪೇಸ್ವಾಮಿಗೆ ಪ್ರಾಣ ಭಯವಿಲ್ಲವೆಂದು ತಿಳಿಸಿ ದಾಖಲು ಮಾಡಿಕೊಂಡರು. ಆತನ ಆರೋಗ್ಯವನ್ನು ಪರೀಕ್ಷಿಸಿ ಯಾವುದೇ ಮಾಹಿತಿಯನ್ನು ಕೊಡಲಿಲ್ಲ. ಆದರೆ ಆತ ಸತ್ತ ಮೇಲೆ ಮಿದುಳುಜ್ವರದಿಂದ ಸತ್ತನೆಂದು ದಾಖಲೆಯನ್ನು ನೀಡಿರುವುದು ಸತ್ಯಕ್ಕೆ ದೂರವಾದುದು. ಇದನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ) ಬೆಂಗಳೂರು ನಗರ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ವಿದ್ಯಾರ್ಥಿ ಸಾವಿಗೆ ಕಾರಣವಾದ ಆಡಳಿತ ವರ್ಗ ತಕ್ಷಣ ರಾಜೀನಾಮೆ ನೀಡಿ ಆಡಳಿತವನ್ನು ಸರ್ಕಾರ ವಹಿಸಿಕೊಳ್ಳಬೇಕು, ಸತ್ತ ವಿದ್ಯಾರ್ಥಿಯ ಕುಟುಂಬಕ್ಕೆ ಪರಿಹಾರವನ್ನು ನೀಡಬೇಕೆಂದು ವಿದ್ಯಾರ್ಥಿ ಫೆಡರೇಶನ್ ತೀವ್ರವಾಗಿ ಒತ್ತಾಯಿಸುತ್ತದೆ. ಇಲ್ಲವಾದರೆ ವಿದ್ಯಾರ್ಥಿಗಳು ಹೋರಾಟಕ್ಕೆ ಕರೆಯನ್ನು ನೀಡುವುದಾಗಿ ಹಾಸ್ಟೆಲ್‌ನ ಎಸ್. ಎಫ್. ಐ. ಘಟಕದ ಅಧ್ಯಕ್ಷ ಕಾಂ. ಗೋಪಾಲಕೃಷ್ಣ, ಉಪಾಧ್ಯಕ್ಷ ತಮ್ಮರು ಹಾಗೂ ಕಾರ್ಯದರ್ಶಿ ಜಿ. ಎಂ. ಮುನಿರಾಜು ತಿಳಿಸಿದ್ದಾರೆ.

ಸಂತಾಪ ಸೂಚಕ ಸಭೆ

ವಿದ್ಯಾರ್ಥಿಗಳ ಸರ್ವಸದಸ್ಯರು ಮತ್ತು ಮುಖ್ಯೋಪಾಧ್ಯಾಯರಾದ ಲಕ್ಷ್ಮಣರಾವ್ ಅಧ್ಯಕ್ಷತೆಯಲ್ಲಿ ತಿಪ್ಪೇಸ್ವಾಮಿಯ ಸಾವಿಗೆ ಸಭೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಈ ಸಭೆಯಲ್ಲಿ ಕಾಂ. ಗೋಪಾಲಕೃಷ್ಣ ಮತ್ತು ಕಾಂ. ಎನ್. ರಾಜಣ್ಣ (ನಗರ ಎಸ್. ಎಫ್. ಐ. ಸಹಕಾರ್ಯದರ್ಶಿ) ಮಾತನಾಡುತ್ತಾ ಹಾಸ್ಟೆಲ್‌ನಲ್ಲಿ ಆಡಳಿತ ವರ್ಗ ವಿದ್ಯಾರ್ಥಿಗಳನ್ನು ಸುಲಿಗೆ ಮಾಡುತ್ತಿದೆ. ಈ ರೀತಿಯ ಪ್ರವೃತ್ತಿ ಹೋಗಬೇಕಾದರೆ ಸರ್ಕಾರವೇ ಆಡಳಿತವನ್ನು ವಹಿಸಿಕೊಳ್ಳುವಂತೆ ಒತ್ತಾಯಿಸಲಾಯಿತು. ○

ಮಂಗಳೂರಿನಲ್ಲಿ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಪಕ್ಷಗಳ ಬೆಲೆ ಏರಿಕೆ ವಿರೋಧಿ ಸಂಯುಕ್ತ ಚಳವಳಿ

ಬೆಲೆ ಏರಿಕೆಗಿದಿರಾಗಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳು ಸಂಯುಕ್ತವಾಗಿ ತಾ.4.12.80 ರಂದು ದ. ಕ. ಜಿಲ್ಲಾಧಿಕಾರಿಗಳ ಕಛೇರಿಯೆದಿರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಎರಡೂ ಪಕ್ಷಗಳ ಸುಮಾರು 500ಕ್ಕೂ ಮಿಕ್ಕಿ ಸ್ವಯಂ ಸೇವಕರು ಬೆಳಿಗ್ಗೆ ಘಂಟೆ 10ರಿಂದ ಸಂಜೆ 4ರ ತನಕ ಸತ್ಯಾಗ್ರಹ ನಡೆಸಿದರು. ಸಂಜೆ 4ಗಂಟೆಗೆ ಕಾಂ. ಕೆ ಆರ್. ಶ್ರೀಯಾನ್, ಕೆ. ಮೂಸಬ್ಬ, ಯು. ಜನಾರ್ಧನ ನಾಯಕ್, ಅಬ್ರಹಾಂ ಕರ್ಕಡ (ಸಿಪಿಐ (ಎಮ್) ಮತ್ತು ಕಾಂ. ಬಿ ವಿ ಕಕ್ಕಿಲ್ಲಾಯ, ಕೆ. ಮೋನಪ್ಪ ಶೆಟ್ಟಿ, ಎಚ್. ಉಮಾನಾಥ ನಾಯಕ್, ಬಿ ವಿಶ್ವನಾಥ ನಾಯಕ್ (ಸಿ. ಪಿ ಐ) ಇವರನ್ನೊಳಗೊಂಡ ನಿಯೋಗ ಮಂಡಳಿಯು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿತು.

ಸಂಜೆ ಸುಮಾರು 5ಘಂಟೆಗೆ ಸತ್ಯಾಗ್ರಹಿಗಳಿದ್ದ ಸ್ಥಳಕ್ಕೆ ಎರಡೂ ಪಕ್ಷಗಳ ವತಿಯಿಂದ ಭಾರೀ ಮೆರವಣಿಗೆಗಳು ಬಂದು ಸತ್ಯಾಗ್ರಹಿಗಳನ್ನು ಕೂಡಿಕೊಂಡು ನಗರ ಸುತ್ತಾಡಿ ಘೋಷಣೆಗಳನ್ನು ಕೂಗುತ್ತಾ ನೆಹರು ಮೈದಾನಿಗೆ ಬಂದು ಸೇರಿತು. ನೆರೆದ ಭಾರೀ ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿಂಪ್ಸನ್ ಸೋನ್ಸ್ (ಸಿ ಪಿ ಐ) ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ಮತ್ತು ಭಾರತ ಕಮ್ಯುನಿಸ್ಟ್ ಪಾರ್ಟಿಯ ದ.ಕ. ಜಿಲ್ಲಾ ಮಂಡಲಿ ಕಾರ್ಯದರ್ಶಿ ಹಾಗೂ ಶಾಸಕರಾದ ಕಾಂ. ಬಿ.ವಿ. ಕಕ್ಕಿಲ್ಲಾಯರು ಮಾತನಾಡಿ ಸರಕಾರದ ಧೋರಣೆಯನ್ನು ಖಂಡಿಸಿ, ಎಲ್ಲಾ ನಿತ್ಯೋಪಯೋಗಿ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಳ್ಳಿ ಪೇಟೆ ಎಂಬ ತಾರತಮ್ಯವಿಲ್ಲದೆ ಜನರಿಗೆ ಕಡಿಮೆ ಬೆಲೆಯಲ್ಲಿ ವಿತರಣೆ ಮಾಡಬೇಕೆಂದೂ, ಇಲ್ಲದಿದ್ದರೆ ಇದಕ್ಕಿಂತಲೂ ತೀವ್ರವಾದ ಕಾರ್ಯಕ್ರಮವನ್ನು ಸಂಘಟಿಸಲಾಗುವುದೆಂದೂ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಸಭಾರಂಭದಲ್ಲಿ ಕಾಂ. ಯು. ಜನಾರ್ಧನ ನಾಯಕರು ಸ್ವಾಗತಿಸಿ, ಕಾಂ. ಎಚ್. ಉಮಾನಾಥ ನಾಯಕರು ಧನ್ಯವಾದಗಳನ್ನರ್ಪಿಸಿದರು.

●

ಮಿಂಚಿನ ಮುಷ್ಕರ

ಕೊಡಗಿನ ಸಿದ್ದಾಪುರದ ಪಕ್ಕದಲ್ಲಿರುವ "ಚಿಕ್ಕನಳ್ಳಿ" ಎಂಬ ಕಾಫೀತೋಟದಲ್ಲಿ, ಹದಿನೆಂಟು ವರ್ಷ ಪ್ರಾಯದ ಲೇಬರ್ ಸೂಪರ್‌ವೈಸರ್‌ನನ್ನು "ಅಯಾ" (ಯಜಮಾನ್) ಎಂದು ಸಂಭೋದಿಸಲಿಲ್ಲವೆಂದು ಹೇಳಿ, ಒಬ್ಬ ಕಾರ್ಮಿಕನಿಗೆ ಕೆಲಸ ನಿಕ್ಷೆಸಿದುದರ ವಿರುದ್ಧ ತೋಟದ ಎಲ್ಲಾ ಕಾರ್ಮಿಕರು ಮಿಂಚಿನ ಮುಷ್ಕರ ಹೂಡಿದರು.

ಮುಷ್ಕರಕ್ಕೆ ಬಗ್ಗಿದ ಮಾಲೀಕವರ್ಗ, ಇನ್ನು ಮುಂದೆ ಯಾರನ್ನೂ ಅಯ್ಯಾ ಎಂದು ಕರೆಯುವುದಿಲ್ಲವೆಂಬ ಕಾರ್ಮಿಕ ಬೇಡಿಕೆಯನ್ನು ಅಂಗೀಕರಿಸಲಾಯಿತು.

ಊಳಿಗಮಾನ್ಯ ಯುಗದ ಮೌಲ್ಯಗಳನ್ನು ಎತ್ತಿಹಿಡಿಯುವ ಮಾಲೀಕರು ಈ ಮೇಲಿನ ಘಟನೆಯಿಂದ ಕಣ್ತೆರೆಯಬೇಕಾಗಿದೆ.

ಡಿ.ವೈ.ಎಫ್.ಐ. ಸಭೆ

ದಿನಾಂಕ 9-12-80 ರಂದು ವಿರಾಜಪೇಟೆಯಲ್ಲಿ ಸ್ಥಳೀಯ ಡಿ. ವೈ. ಎಫ್. ಐ. ಕಾರ್ಯಕರ್ತರ ಸಭೆ ಸೇರಿತ್ತು.

ಸಭೆಯಲ್ಲಿ ಡಿ. ವೈ. ಎಫ್. ಐ. ನ ರಾಜ್ಯಸಮಿತಿಯ ಸಂಚಾಲಕರಲ್ಲೊಬ್ಬರಾದ ಕಾಂ. ಶ್ರೀರಾಮರೆಡ್ಡಿ ಭಾಗವಹಿಸಿದ್ದು, ರಾಷ್ಟ್ರದ ಯುವ ಜನಾಂಗದ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಅದೇ ದಿನ ಸಾಯಂಕಾಲ ಸರ್ವ ಸದಸ್ಯರ ಸಭೆ ಸ್ಥಳೀಯ ಪಂಚಾಯ್ತಿ ಹಾಲಿನಲ್ಲಿ ಸೇರಿತ್ತು.

●

ಐಕ್ಯರಂಗ

ಓದಿ

ಅಖಿಲಭಾರತ ಕಿಸಾನ್ ಸಭೆ

೧೯೩೬ರ ರಾಷ್ಟ್ರೀಯ ಚಳುವಳಿಯಲ್ಲಿ ಎಡಪಂಥೀಯ ನೇತೃತ್ವದಲ್ಲಿ ರೂಪಗೊಂಡ ಅಖಿಲಭಾರತ ಕಿಸಾನ್‌ಸಭೆ ಇಂದು ಭಾರತ ರೈತವರ್ಗದ ಅತಿದೊಡ್ಡ ಸಂಘಟನೆಯಾಗಿ ಬೆಳೆದಿದೆ. ಅದರ ಸದಸ್ಯತ್ವ ೧೯೭೯-೮೦ರ ಮೇರೆಗೆ ೪೫ ಲಕ್ಷದ ೨೬ ಸಾವಿರದ ೨೪೩ಕ್ಕೆ ತಲುಪಿದೆಯೆಂದರೆ ಅದು ಅನೇಕ ತ್ಯಾಗಪೂರ್ಣ ಬಲಿದಾನಮಾಡಿ ಗಳಿಸಿದ ರೈತರ ಹೋರಾಟದ ಫಲ.

ಅಖಿಲಭಾರತ ಮಟ್ಟದಲ್ಲಿ ಪ್ರಚಂಡವಾಗಿ ಬೆಳೆದುಬರುತ್ತಿರುವ ಶಕ್ತಿಯುತವಾದ ರೈತಚಳುವಳಿಯ ಹಿನ್ನೆಲೆಯಲ್ಲೇ ಕೇರಳದ ತ್ರಿಚೂರಿನಲ್ಲಿ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ ಸೇರುತ್ತಿರುವುದು ಇನ್ನಷ್ಟು ಪ್ರಾಮುಖ್ಯದ ವಿಷಯ. ತಮಿಳುನಾಡು, ಕರ್ನಾಟಕ, ರಾಜಸ್ಥಾನ್, ಉತ್ತರಪ್ರದೇಶ ಎಂಬೀ ರಾಜ್ಯಗಳಲ್ಲೂ ಕೊನೆಯದಾಗಿ ಮಹಾರಾಷ್ಟ್ರದ ನಾಸಿಕ್‌ನಲ್ಲೂ ರೈತರ ಚಳುವಳಿ ತೀವ್ರವಾಗುತ್ತಿವೆ.

ನವಂಬರ್ 29, ಶನಿವಾರ ಬೆಳಗ್ಗೆ ಹುತಾತ್ಮ ಕಾಂ. ಅಳೀಕೋಡನ್ ರಾಘವನ್‌ರವರ ನೆನಪಾಗಿ ಕಟ್ಟಲ್ಪಟ್ಟ ಸ್ಮಾರಕ ಸಂಭಾಂಗಣದಲ್ಲಿ ಆರಂಭಿಸಿದ ಅಖಿಲಭಾರತ ಕಿಸಾನ್ ಕೌನ್ಸಿಲ್ ದಿವಂಗತರಾದ ಕುಞ್ಞಂಬು, ಸುಹೃದ್ ಮಲ್ಲಿಕ್ ಚೌಧುರಿ ಮುಂತಾದ ಕಿಸಾನ್ ನಾಯಕರಿಗೂ, ಹಾಗೂ ರಾಷ್ಟ್ರೀಯ ನಾಯಕರಾದ ದಿವಂಗತ ಪಿ ಸಿ ಜೋಷಿಯವರಿಗೂ ತಮ್ಮ ಹೃದಯಾಂಜಲಿಯನ್ನು ಅರ್ಪಿಸಿ ಆರಂಭವಾಯಿತು.

ಪಶ್ಚಿಮ ಬಂಗಾಳದ ಕಂದಾಯ ಸಚಿವರೂ ಹಾಗೂ ಕಿಸಾನ್ ಸಭೆಯ ಅಧ್ಯಕ್ಷರೂ ಆದ ಕಾಂ. ಬಿನಾಯ್ ಕೃಷ್ಣ ಚೌಧುರಿ ಅಧ್ಯಕ್ಷತೆ ವಹಿಸಿದ್ದರು. ಸಿ ಪಿ ಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಬಸವಪುನ್ನಯ್ಯ, ಹರೆಕಿಷನ್ ಸಿಂಗ್ ಸೂರ್ಜೀತ್, ಎಂ. ಎ ರಸೂಲ್ (ಕಿಸಾನ್‌ಸಭೆ ಉಪಾಧ್ಯಕ್ಷ) ಕಾಂತಿಮೊಯ್‌ಘೋಷ್ (ಪ ಬಂಗಾಳದ ಕಿಸಾನ್‌ಸಭಾ ಪ್ರಧಾನ ಕಾರ್ಯದರ್ಶಿ) ಅಧ್ಯಕ್ಷ ವೇದಿಕೆಯಲ್ಲಿದ್ದರು.

ಪ್ರಧಾನಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ ವರದಿಯನ್ನು ಮಂಡಿಸಿ-ರೈತರು ಉತ್ಪಾದಿಸುವ ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಸಿಗದಂತೆಯೂ ಇನ್ನೊಂದು ಕಡೆ ತಾವು ಖರೀದಿ ಮಾಡುವ ವಸ್ತುಗಳಿಗೆ ಹೆಚ್ಚಿನ ಬೆಲೆ ಕೊಡಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಿ ರೈತಾಪಿ ಜನರನ್ನು ಎರಡು ಕಡೆಗಳಿಂದಲೂ ಈ ಬಂಡವಾಳಶಾಹಿ ಸರ್ಕಾರ ಸುಲಿಗೆ ಮಾಡುತ್ತಿರುವುದನ್ನು ವಿವರಿಸಿದರು.

ಕಿಸಾನ್‌ಸಭೆಯ ಬಲಿಷ್ಠ ಕೋಟೆಯಾದ ಪ. ಬಂಗಾಳದಿಂದಲೇ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದು, ಕೇರಳ, ಆಂಧ್ರಪ್ರದೇಶ್, ತಮಿಳುನಾಡು, ಬಿಹಾರ್, ಗುಜರಾತ್, ಹರಿಯಾಣ, ಹಿಮಾಚಲ್ ಪ್ರದೇಶ್, ಜಮ್ಮು ಕಾಶ್ಮೀರ್, ಕರ್ನಾಟಕ, ಮಧ್ಯಪ್ರದೇಶ್, ಮಹಾರಾಷ್ಟ್ರ ಒರಿಸ್ಸಾ, ಪಂಜಾಬ್ ಹಾಗೂ ತ್ರಿಪುರಾದಿಂದ ಬಂದ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕದಿಂದ ವಿಶೇಷ ಕರೆಯ ಮೇರೆಗೆ ಕೌನ್ಸಿಲ್‌ನಲ್ಲಿ, ಚಾರಿತ್ರಿಕ ರೈತ ಹೋರಾಟದ ನಾಯಕರಲ್ಲೊಬ್ಬರಾದ ಕಾಂ ಹಳಕಟ್ಟಿಯವರು ಭಾಗವಹಿಸಿದ್ದರು. ಕರ್ನಾಟಕದ ಇಂದಿರಾ ಕಾಂಗ್ರೆಸ್ ಆಡಳಿತವನ್ನಲುಗಾಡಿಸಿದ ಈ ಚಳುವಳಿಯ ಫಲವಾಗಿ ರಾಜ್ಯ ಸರ್ಕಾರ ರೈತರಿಗೆ 85 ಕೋಟಿರೂಗಳ ರಿಯಾಯಿತಿಯನ್ನು ಮಾಡಬೇಕಾಗಿ ಬಂತು. ಕರ್ನಾಟಕದಲ್ಲಿ ಕಾಡುಗಿಚ್ಚಿನಂತೆ ಹರಡಿದ ಈ ಹೋರಾಟ ಭಾರತದ ರೈತರಲ್ಲಿ ಒಂದು ಹೊಸ ಸ್ಫೂರ್ತಿಯನ್ನುಂಟುಮಾಡಿದೆಯೆಂದು ಕಾಂ, ಚಾತುನ್ನಿ ಮಾಸ್ಟರ್ ಮಂಡಿಸಿದ ವರದಿಯಲ್ಲಿ ಹೇಳಿದರು.

ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ರೈತರ ನಾಯಕರಾದ ಕಾಂ ಶಂಕರಯ್ಯನವರು "ತಮಿಳುನಾಡಿನಲ್ಲಿ ಇತ್ತೀಚೆಗೆ ನಡೆದ ಹೋರಾಟಗಳ ಬಗ್ಗೆ ವಿವರಿಸಿ ತಂಜಾವೂರಿನಲ್ಲಿ ಸೆಪ್ಟೆಂಬರ್ 30ರಂದು ಕೇಂದ್ರ ಸರ್ಕಾರ ಜಾರಿಗೆ ತಂದ ಸುಗ್ರೀವಾಜ್ಞೆಗೆ ವಿರುದ್ಧವಾಗಿ ಹಾಗೂ ಬೆಲೆಯೇರಿಕೆಗೆ ವಿರುದ್ಧವಾಗಿಯೂ ನಡೆದ ಮುಷ್ಕರದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರು, ಕೃಷಿಕೂಲಿಗಾರರು, ಭಾಗವಹಿಸಿದ್ದರು ಅದಕ್ಕೂ ಮುಂಚೆ ಆಗಸ್ಟ್ 26, 28 ರಂದು ನಡೆದ ಚಳುವಳಿಯಲ್ಲಿ 1600 ಕಿಸಾನ್‌ಸಭಾ ಸದಸ್ಯರುಗಳು ಭಾಗವಹಿಸಿ ಬಂಧಿತರಾದರು. ಅಕ್ಟೋಬರ್ 13ರಂದು ಕೇಂದ್ರ ಸರ್ಕಾರದ ಕಚೇರಿಗಳ ಮುಂದೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಹತ್ತುಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದರು. ಎಡಪಂಥೀಯ ಪಕ್ಷಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಎ.ಐ.ಎ.ಡಿ ಎಂ.ಕೆ. ಸರ್ಕಾರ ರೈತರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿದೆ" ಎಂದು ಹೇಳಿದರು.

ರೈತರ ಚಳುವಳಿಯ ಫಲವಾಗಿ ಕಬ್ಬಿನ ಬೆಲೆಯನ್ನು ರಾಜ್ಯಸರ್ಕಾರ 250 ರೂಗಳವರೆಗೆ ಏರಿಸಲಾಯಿತೆಂದು ಪಂಜಾಬಿನ ರೈತಸಂಘದ ಕಾರ್ಯದರ್ಶಿ ಕಾಂ. ದಿಲೀಪ್‌ಸಿಂಗ್ ಜೋಹಲ್ ಹೇಳಿದರು. ಇದರಿಂದಲೂ ತೃಪ್ತರಾಗದೆ ಚಳುವಳಿ ಮುಂದುವರಿಯಲಾಗುತ್ತಿದೆ ಎಂದು ನುಡಿದರು.

ಕರ್ನಾಟಕದಿಂದ ಬಂದ ಕಾಂ. ಹಳಕಟ್ಟಿಯವರು ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ರೈತ ಚಳುವಳಿಯ ಬಗ್ಗೆ ವರದಿ ಮಾಡಿದರು.

ವಿದೇಶಿ ಸಮಸ್ಯೆಗಳ ಬಗ್ಗೆ ನಡೆಯುತ್ತಿರುವ ಪ್ರತಿಗಾಮಿ ಶಕ್ತಿಗಳ ಚಳುವಳಿಯು ಕಾರಣ ಕಿಸಾನ್‌ಸಭೆಯ ಚಟುವಟಿಕೆಗಳು ರಹಸ್ಯವಾಗಿ ಮಾಡಬೇಕಾಗಿ ಬಂದಿಯೆಂದು ಅಸ್ಸಾಂನಿಂದ ಬಂದ ರೈತರ ನಾಯಕ ಕಾಂ, ನೂರುಲ್‌ಹುದ ಹೇಳಿದರು.

ಪಿ. ಪಿ. ಎಸ್ಥೋಸ್, ಪಿ. ಕೆ. ಕುಞ್ಞಚ್ಚನ್ (ಕೇರಳ) ರವಿಚಂದ್ರ ವಿಶ್ವಾಸ್ (ಒರಿಸ್ಸಾ) ಸಮರ್ ಚೌಧುರಿ (ತ್ರಿಪುರ) ರಮೇಶ್ ರಡಿನ್, ಸ. ಭೋದ್‌ರಾಜ್ (ಬಿಹಾರ್) ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದರು.

ಮೂರು ದಿನಗಳ ಅಧಿವೇಶನದ ನಂತರ ಭಾನುವಾರ ಸಂಜೆ ನಡೆದ ಬೃಹತ್ ರ‍್ಯಾಲಿಯಲ್ಲಿ ಒಂದುಲಕ್ಷಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದ್ದರು. ಅನೇಕ ರ‍್ಯಾಲಿಗಳಿಗೂ, ಉತ್ಸವಗಳಿಗೂ ಸಾಕ್ಷ್ಯವಹಿಸಿದ ತ್ರಿಚೂರು ನಗರ ಒಂದು ಕೆಂಪು ಸಮುದ್ರವಾಯಿತು. ಪಶ್ಚಿಮ ಸೂರ್ಯನ ಕೆಂಪು ಕಿರಣಗಳು ಅದಕ್ಕೆ ಇನ್ನಷ್ಟು ಕೆಂಪು ಬಣ್ಣವನ್ನು ಬಳಿಸಿತು. ಅನೇಕ ದಿನಗಳ ಆಲಸ್ಯದಿಂದ ಎಚ್ಚೆತ್ತ ಭಾರತದ ರೈತನ ಮನೋವೀರ್ಯವೆ ಆಗಿತ್ತು ಅಖಿಲ ಭಾರತ ಕಿಸಾನ್ ಅಧಿವೇಶನದ ಜೊತೆ ನಡೆದ ಈ ಬೃಹತ್ ರ‍್ಯಾಲಿ. ಹತ್ತು ಸಾವಿರಕ್ಕೂ ಹೆಚ್ಚು ಕೆಂಪು ವಲಂಟಿಯರ್‌ಗಳು ಮುನ್ನಡೆಯಲು, ಬಿಳಿ ಪೈಜಾಮ ಹಾಗೂ ಕೆಂಪು ಕುಪ್ಪಸಗಳನ್ನು ಧರಿಸಿದ ಮಹಿಳಾ ವಲಂಟಿಯರ್‌ಗಳು, ಕಾಕಿನಿಕ್ಕರ್, ಬಿಳಿ ಬಟ್ಟೆಯನ್ನು ಧರಿಸಿದ ಬಾಲಸಂಘದ ಸ್ವಯಂಸೇವಕರು ಪ್ರದರ್ಶನ ರ‍್ಯಾಲಿಗೆ ಸ್ಫೂರ್ತಿಯನ್ನುಂಟುಮಾಡಿದರು. ಅವರ ಹಿಂದೆ ಲಕ್ಷಗಟ್ಟಲೆ ಹರಿದ ಜನಶಕ್ತಿಯನ್ನು ತ್ರಿಚೂರಿನ ರಸ್ತೆಗಳ ಎರಡು ಪಕ್ಕದಲ್ಲೂ ಸಹಸ್ರಾರು ಜನರು ನಿಂತು ರ‍್ಯಾಲಿಗೆ ಜಯಕಾರ ಮಾಡಿದುದು ಒಂದು ಅಪೂರ್ವ ದೃಶ್ಯವಾಗಿತ್ತು.

ನೆರೆದಿದ್ದ ಜನಸ್ತೋಮವನ್ನು ಉದ್ದೇಶಿಸಿ ಭಾರತ ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸಿಸ್ಟ್) ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್., ಹರಿಕಿಷನ್‌ಸಿಂಗ್ ಸೂರ್ಜಿತ್, ಎಂ, ಬಸವ ಪುನ್ನಯ್ಯ, ಬಿನಾಯ್ ಕೃಷ್ಣ ಚೌಧುರಿ, ಕೇರಳದ ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್, ಸಚಿವರುಗಳಾದ ಟಿ. ಕೆ. ರಾಮಕೃಷ್ಣನ್, ಕೆ, ಆರ್. ಗೌರಿಯಮ್ಮ ಭಾಷಣ ಮಾಡಿದರು.

ವರದಿ : —ಎಂ. ದಾಮು

o

ಅಂತರಾಷ್ಟ್ರೀಯ ವಿದ್ಯಮಾನ

ಎಲ್‌ಸಲ್ವಾಡೋರ್

ಕೊಲೆ, ಹಸಿವು ಮತ್ತು ಬಡತನದ ೧ ವರ್ಷ

1979ರ ಅಕ್ಟೋಬರ್ 15ರಂದು ದಕ್ಷಿಣ ಅಮೇರಿಕಾದ ದೇಶ ಎಲ್ ಸಲ್ವಾಡೋರ್‌ನ ಆಗಿನ ಮಿಲಿಟರಿ ಶಾಸನದ ವಿರುದ್ಧ ಸೈನಿಕ ಕ್ಷಿಪ್ರಕ್ರಾಂತಿ ನಡೆದು ಸೈನ್ಯಾಧಿಕಾರಿಗಳಾದ ಜೈಮೆ ಅಬ್ದುಲ್ ಗುಟಿಯೆರಜ್ ಹಾಗೂ ಲಿಡೊಲ್ಫೊ ಅರ್ನಾಲ್ಡೊ ಮಜಾನೋ ಅಧಿಕಾರಕ್ಕೆ ಬಂದರು ಆ ನಂತರದ ಕೇವಲ ಒಂದು ವರ್ಷದ ಅವಧಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಜನ ಕೊಲ್ಲಲ್ಪಟ್ಟಿದ್ದಾರೆ. ಇವತ್ತು ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಇದಲ್ಲದೆ ಇಂತಹ ಸಾಮೂಹಿಕ ನರಮೇಧ ನಡೆಸಿದ ಆಳುವ ಕೂಟ ಹಲವರನ್ನು "ಕಾಣೆಯಾಗಿದ್ದಾರೆ" ಎಂದು ಪ್ರಚುರಪಡಿಸಿತ್ತು. ಆದರೆ ಕೆಲವು ದಿನಗಳ ನಂತರ ಮೈಮೇಲೆಲ್ಲಾ ಹಿಂಸಾಚಾರದ ಗುರುತುಗಳಿಂದ ಕೂಡಿದ ಇಂತಹವರ ನಿರ್ಜೀವ ದೇಹಗಳು ಹಲವಾರು ಸಿಕ್ಕಿವೆ.

ಈ ಅಮಾನುಷ ದಮನ ಕಾರ್ಯವನ್ನು ನೋಡಿದರೆ ಈ ಹೊಸ ಆಳುವ ಕೂಟದ ಸೈನಿಕಸೋಲು ಸ್ಪಷ್ಟವಾಗುತ್ತದೆ. ಇದರ ಜತೆಗೇ ಸರಕಾರ ರಾಜಕೀಯವಾಗಿಯೂ, ಆರ್ಥಿಕವಾಗಿಯೂ ಸೋತಿದೆ,

ಸಮಯಸಾಧಕ ಹಾಗೂ ಮಹತ್ವಾಕಾಂಕ್ಷಿಗಳಾದ ಕ್ರಿಶ್ಚಿಯನ್ ಡೆಮೋಕ್ರಾಟ್ ಪಕ್ಷದ ಸಣ್ಣ ಶ್ರೀಮಂತ ಗುಂಪೊಂದನ್ನು ಬಿಟ್ಟರೆ ಬೇರೆ ಯಾವ ರಾಜಕೀಯ ಪಕ್ಷದಿಂದಲೂ ಈ ಆಳುವ ಕೂಟಕ್ಕೆ ಯಾವ ಬೆಂಬಲವೂ ಸಿಕ್ಕಿಲ್ಲ; ಜನರಿಗೆ ಲಾಭಕಾರಿಯಾದ ಒಂದೇ ಒಂದು ಕಾನೂನು ಮಾಡುವುದೂ ಈ ಆಳುವ ಕೂಟದ ಕೈಲಾಗಿಲ್ಲ.

ಹೀಗೆ ಸೈನಿಕ ಹಾಗೂ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷಗಳ ಈ ಸೈನಿಕ, ರಾಜಕೀಯ ಹಾಗೂ ಆರ್ಥಿಕ ಸೋಲಿನ ಪರಿಣಾಮವಾಗಿ ಜನರನ್ನು "ಸುಮ್ಮನಾಗಿಸಲು" ಅವರ ವಿರುದ್ಧ ಹುಚ್ಚು ರಕ್ತ ಪಿಪಾಸೆಯ ಸ್ಪರ್ಧೆ ನಡೆದಿದೆ. ಆದರೆ ಜನರನ್ನು "ಸುಮ್ಮನಾಗಿಸುವ" ಇಂತಹ ಪ್ರಯತ್ನವೇ ಹಿಂದಿನ ಮಿಲಿಟರಿ ಸರಕಾರದ ಪತನಕ್ಕೆ ಕಾರಣವಾಗಿತ್ತು ಎಂಬುದನ್ನು ಈದಿನ ಆಳುವ ಕೂಟ ಮರೆತಿದೆ.

ಅಮೇರಿಕೆಯ ಸಾಮ್ರಾಜ್ಯಶಾಹಿಗಳ ಒಪ್ಪಿಗೆಪಡೆದು ಅಧಿಕಾರ ಕಸಿದುಕೊಂಡ ಈ ಸೈನಿಕ ಹಾಗೂ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಕೂಟ ಎಲ್ಲವನ್ನೂ ಕಳೆಕೊಂಡವರಿಗಾಗಿ ಕೆಲವು ಸುಧಾರಣೆಗಳನ್ನು ತರುವ, ದಮನ ಹಾಗೂ ಹಿಂಸಾಚಾರ ಕೊನೆಗೊಳಿಸುವ, ಹಿಂದಿನ ಸರಕಾರ ಮಾನವ ಹಕ್ಕುಗಳ ಉಲ್ಲಂಘನೆ ನಡೆಸಿದ ಘಟನೆಗಳ ತನಿಖೆ ನಡೆಸುವ ಹಾಗೂ ಎಡಪಂಥೀಯರೂ ಸೇರಿದಂತೆ ಎಲ್ಲರೂ ಭಾಗವಹಿಸಬಹುದಾದ ಸರ್ಕಾರ ರಚಿಸುವ ಆಶ್ವಾಸನೆ ಕೊಟ್ಟಿತ್ತು. ಇವು ಯಾವುವೂ ಈಡೇರಲಿಲ್ಲ.

ಈ ಆಳುವ ಕೂಟ ಮಾನವ ಹಕ್ಕುಗಳ ಬಗ್ಗೆ ಜನರಿಗೆ ಕೊಟ್ಟ ಅತೀಮುಖ್ಯವಾದ ಆಶ್ವಾಸನೆಯನ್ನೂ ನಿರ್ಲಕ್ಷಿಸಿದಾಗಲೇ ಅದರ ನಿಜವಾದ ಉದ್ದೇಶ ಏನು ಎಂಬುದು ತಿಳಿದು ಬಂತು.

ಕ್ಷಿಪ್ರಕ್ರಾಂತಿ ನಡೆದ ಕೆಲವೇ ದಿನಗಳ ನಂತರ ತನ್ನ ಹಿಂದಿನ ಆಡಳಿತ ಬಂಧಿಸಿದ ನೂರಾರು "ಕಾಣೆಯಾದ" ಜನರ ಪತ್ತೆಹಚ್ಚುವುದು ಅಥವಾ ಆ ಬಗ್ಗೆ ತನಿಖೆ ನಡೆಸುವುದೂ ಅಸಾಧ್ಯ ಎಂದು ಈಗಿನ ಆಳುವ ಕೂಟ ಯಾವ ನಾಚಿಕೆಯೂ ಇಲ್ಲದೆ ಪ್ರಕಟಿಸಿತ್ತು.

"ಕಾಣೆಯಾದ" ವ್ಯಕ್ತಿಗಳನ್ನು ಸೈನ್ಯದ ಮೇಲಧಿಕಾರಿಗಳು ಹಾಗೂ ಅವರ ಹತೋಟಿಯಲ್ಲಿರುವ ಫ್ಯಾಸಿಸ್ಟ್ ಗುಂಪುಗಳು ಕೊಂದುಹಾಕಿವೆಯೆಂದು ತಿಳಿಸುವ ಧೈರ್ಯ ಅಮೇರಿಕದ ಸಂಯುಕ್ತ ಸಂಸ್ಥಾನವು ಅಧಿಕಾರದಲ್ಲಿ

(7ನೇ ಪುಟ ನೋಡಿ)

(ವಿದೇಶಿ ಕಂಪನಿಗಳ ಮೇಲಿನ ನಿಯಂತ್ರಣವನ್ನು ಗಾಳಿಗೆ ತೂರುವ ಹೊಸನೀತಿ)

ಇರಾನ್-ಇರಾಕ್ ಯುದ್ಧದ ಹಿನ್ನೆಲೆಯಲ್ಲಿ, ಜಗತ್ತಿನ ತೈಲ ಪೂರೈಕೆ ಪರಿಸ್ಥಿತಿ ಹದಗೆಡುತ್ತಿರುವುದರಿಂದ ಭಾರತ ಸರ್ಕಾರ 'ಆಂತರಿಕ ತೈಲ ಮೂಲಗಳ ಶೋಧನೆಯನ್ನು ತೀವ್ರಗೊಳಿಸಲು ಮತ್ತು ಅತ್ಯಂತ ಕಡಿಮೆ ಸಮಯದಲ್ಲಿ ಇವುಗಳನ್ನು ಬಳಸುವಂತಾಗಲು' ಹೊಸ ನೀತಿಯೊಂದನ್ನು ರೂಪಿಸಿದೆ. ಕೆಲವು ಸಾಗರ ತಳ ನಿವೇಶನಗಳು ಸೇರಿದಂತೆ 28 ತೈಲ ಶೋಧನೆಯ ನಿವೇಶನಗಳನ್ನು ತೈಲ ಉತ್ಪಾದನೆಯನ್ನು ಹಂಚಿಕೊಳ್ಳುವ ಒಪ್ಪಂದದ ಮೇಲೆ ಪೂರ್ತಿಯಾಗಿ ವಿದೇಶಿ ಕಂಪನಿಗಳಿಗೆ ಒಪ್ಪಿಸುವುದು ಈ ನೀತಿಯ ಮುಖ್ಯ ಪರಿಣಾಮ. ಈ ನಿವೇಶನಗಳ ಹಂಚಿಕೆಗೆ ಈಗಾಗಲೇ ಟೆಂಡರುಗಳನ್ನು ಕರೆಯಲಾಗಿದೆ. ಆಗಲೇ 40ಕ್ಕೂ ಹೆಚ್ಚು ಕಂಪನಿಗಳು ಟೆಂಡರುಗಳನ್ನೂ ಸಲ್ಲಿಸಿವೆ, ಈ ಕಂಪನಿಗಳೊಂದಿಗೆ, ಈ ಬಗ್ಗೆ ಷರತ್ತುಗಳು ಮತ್ತಿತರ ವಿವರಗಳನ್ನು ಸದ್ಯದಲ್ಲೇ ಪೆಟ್ರೋಲಿಯಂ ಇಲಾಖೆ ಚರ್ಚಿಸಿ ಈ ವಿಷಯದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ. ಇನ್ನೂ ಮೂರುನಾಲ್ಕು ತಿಂಗಳುಗಳಲ್ಲಿ ಈ ಎಲ್ಲಾ ಕ್ರಮಗಳು ಮುಗಿಯುವ ನಿರೀಕ್ಷೆ ಇದೆ ಈಗಿರುವ ಯೋಜನೆಯ ಪ್ರಕಾರ ಎಲ್ಲಾ ನಿರ್ವಿಘ್ನವಾಗಿ ನಡೆದರೆ, ಮುಂದಿನ ವರ್ಷದ ಮಧ್ಯಭಾಗದ ಹೊತ್ತಿಗೆ ಭಾರತದಲ್ಲಿ ಈ ವಿದೇಶಿ ಕಂಪನಿಗಳು ತಮ್ಮ ಎಲ್ಲಾ ಆಟಾಟೋಪಗಳೊಂದಿಗೆ ಹಿಂದಿರುಗಲಿವೆ

ಹೊಸ ನೀತಿಯ ರೂಪ ರೇಷೆಗಳು

ಕೂಡಲೇ ತೈಲ ಶೋಧನೆ ಮಾಡುವುದು ಎಷ್ಟು ಅಗತ್ಯವಾಗಿದೆಯೆಂದರೆ ಯಾವುದೇ ರೀತಿಯ ನೀತಿ, ನಿಯಮಾವಳಿಗಳು ಈ ಕೆಲಸವನ್ನು ವಿದೇಶಿ ಕಂಪನಿಗಳಿಗೆ ವಹಿಸಿಕೊಡುವುದಕ್ಕೆ ಅಡ್ಡಿಯಾಗಬಾರದು ಎಂದು ಪೆಟ್ರೋಲಿಯಂ ಖಾತೆ ಭಾವಿಸುತ್ತದೆ, ತೈಲ ಕಂಪನಿಗಳ ಪಾಲನ್ನೂ ಮಾರು ಕಟ್ಟೆ ದರದಲ್ಲಿ ಕೊಳ್ಳಲು ಸಹಾಯಕವಾಗುವುದು. ಈ ರೀತಿ ನಮ್ಮ ಎಲ್ಲಾ ಉತ್ಪನ್ನಗಳು ನಮಗೆ ದೊರೆಯುವಂತೆ (ಸ್ವಲ ದುಬಾರಿಯಾದರೂ) ಮಾಡಲು ಈ ರೀತಿ ವಿದೇಶಿ ಕಂಪನಿಗಳಿಗೆ ಬೇಷರತ್ ನಿವೇಶನಗಳ ಹಂಚಿಕೆ ಅವಶ್ಯ. ಇದು ನಮ್ಮ ಸರ್ಕಾರದ ಪೆಟ್ರೋಲಿಯಂ ಖಾತೆಯ ತರ್ಕ.

ಶೋಧನೆಯಲ್ಲಿ ಹೆಚ್ಚುಹೆಚ್ಚು ಸ್ವಾವಲಂಬನೆ ಮತ್ತು ವಿದೇಶಿ ಕಂಪನಿಗಳ ಸಹಾಯ ತೆಗೆದುಕೊಳ್ಳಲೇಬೇಕಾದಾಗ ಅವುಗಳ ಮೇಲೆ ದೇಶದ ಹಿತಾಸಕ್ತಿಗೆ ಧಕ್ಕೆ ಬರದಂತೆ ಷರತ್ತುಗಳು ಹಾಗೂ ನಿಯಂತ್ರಣಗಳ ಹೇರಿಕೆ. 60ರ ದಶಕದ ಕೊನೆಯಲ್ಲಿ ಈ ನೀತಿಯ ಪ್ರಕಾರ ವಿದೇಶಿ ಕಂಪನಿಗಳು ತೈಲ ಶುದ್ಧೀಕರಣ ಮತ್ತು ಮಾರಾಟದ ಹಕ್ಕುಗಳನ್ನು ಬಿಟ್ಟುಕೊಡಬೇಕೆಂದು ಸಹ ಸರ್ಕಾರ ನಿರ್ದೇಶನ ನೀಡಿತ್ತು. ತೈಲಶೋಧನೆಯ ಕಾರ್ಯ ವಿದೇಶಿ ಕಂಪನಿಗಳಿಗೆ ವಹಿಸುವುದನ್ನೂ ನಿಲ್ಲಿಸಿತ್ತು. ಈ ಕಾರ್ಯವನ್ನು ಪೂರ್ಣವಾಗಿ ವಹಿಸಿದಾಗಲೆಲ್ಲ ವಿದೇಶಿ ಕಂಪನಿಗಳು ಇದರಲ್ಲಿ ಆಸಕ್ತಿ ವಹಿಸಿರಲಿಲ್ಲ ಮತ್ತು ಸಫಲವಾಗಲೂ ಇಲ್ಲ. ಒಟ್ಟಾರೆ ಆದಷ್ಟು ಭಾರತೀಯ ನಿವೇಶನಗಳಲ್ಲಿ ತೈಲಶೋಧನೆ ಆಗದಂತೆ ತಡೆಯುವುದು ಈ ಕಂಪನಿಗಳ ಉದ್ದೇಶವಿದ್ದಂತಿತ್ತು. ಈ ಕಹಿ ಅನುಭವವೇ ಸ್ವಾವಲಂಬನೆಯ ನೀತಿ ಅನುಸರಿಸಲು ಒಂದು ಪ್ರಮುಖ ಕಾರಣವಾಗಿತ್ತು. ಅದೇ, ಒ.ಎನ್.ಜಿ.ಸಿ.ಯ ಜತೆಗೆ ಮತ್ತು ಅದರ ಮೇಲ್ವಿಚಾರಣೆಯಲ್ಲಿ ವಿದೇಶಿ ಕಂಪನಿಗಳು ತೈಲಶೋಧನೆಯಲ್ಲಿ ಕಾರ್ಯವಾಗುವವರೆಗೆ ಅದನ್ನು ಮುಂದೂಡುವುದು ಸೂಕ್ತ; ಒ.ಎನ್.ಜಿ.ಸಿ. ಇದಕ್ಕೆ ಬೇಕಾದ ತಾಂತ್ರಿಕ ಜ್ಞಾನ, ಪರಿಣತಿ ರೂಢಿಸಿಕೊಂಡಾಗ ಬೇಕಾದ ಉಪಕರಣಗಳನ್ನು ಪಶ್ಚಿಮದಿಂದ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಮಾಡಿ ಕೆಲವು ವಿಶೇಷ ಪರಿಣತಿಯ ಕೆಲಸಗಳಿಗೆ ಮಾತ್ರ ವಿದೇಶಿ ತಜ್ಞರನ್ನು ಉಪಯೋಗಿಸುವುದು; ಇದು ನಿರ್ಧಾರಿತ ನೀತಿಯಾಗಿ ಇಡೀ ಕಾರ್ಯಾಚರಣೆಯನ್ನು ವಿದೇಶಿ ಕಂಪನಿಗಳಿಗೆ ವಹಿಸುವುದಕ್ಕಿಂತ ಇದು ಸೂಕ್ತ, ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಒಳ್ಳೆಯದು ಎಂದು ಭಾವಿಸಲಾಗಿತ್ತು.

ಈ ಅವಧಿಯಲ್ಲಿ ಸಹ ಸ್ವಾವಲಂಬನೆಯ ನೀತಿ ನಿಷ್ಠುರವಾಗಿ ಜಾರಿಗೆ ತರಲಾಗಿತ್ತು ಎಂದೇನಲ್ಲ. ನಮ್ಮ ತೈಲ ಸಂಪತ್ತು ಮತ್ತು ಪೂರೈಕೆಯ ಮೇಲೆ ವಿದೇಶಿ ಕಂಪನಿಗಳ ಹಿಡಿತ ಸಾಕಷ್ಟು ಇತ್ತು. ವಿದೇಶಿ ಕಂಪನಿಗಳ ಕಪಟ ನಾಟಕದಿಂದ, ವ್ಯೂಹದಿಂದ ಬೇಸತ್ತು ಇಂತಹ ನೀತಿ ನಮ್ಮ ಬಂಡವಾಳಶಾಹಿ ಸರ್ಕಾರ ಅನುಸರಿಸಲೇ ಬೇಕಾಗಿ ಬಂದಿತ್ತು. ಆದಾಗ್ಯೂ, ಸಾಧ್ಯವಿದ್ದಲ್ಲೆಲ್ಲ ವಿದೇಶಿ ಆಸಕ್ತಿಗಳೊಂದಿಗೆ ರಾಜಿಗೆ ಧಾವಿಸುತ್ತಿತ್ತು.

ಆದರೆ ಈಗಿನ ವಿದೇಶಿ ಕಂಪನಿಗಳಿಗೆ ಪೂರ್ಣ 'ಸ್ವಾತಂತ್ರ್ಯ' ಕೊಡುವ ನೀತಿಯ ಪ್ರಕಾರ ಈ ಥರದ ಯಾವುದೇ ನಿಬಂಧನೆಗಳು, ಷರತ್ತುಗಳು ಇಲ್ಲ. ಯಾವುದೇ ರೀತಿಯ ತಾಂತ್ರಿಕ ಮಾಹಿತಿ ಸರ್ಕಾರಕ್ಕಾಗಲಿ, ಒ. ಎನ್. ಜಿ ಸಿ ಗಾಗಲಿ ಕೊಡಬೇಕಾಗಿಲ್ಲ. ಅದರ ಬದಲಾಗಿ ಈ ಕಂಪನಿಗಳಿಗೆ ವಹಿಸಿಕೊಡುವ ನಿವೇಶನಗಳ ಬಗ್ಗೆ ಒ.ಎನ್.ಜಿ.ಸಿ. ಮತ್ತು ಸರ್ಕಾರದ ಹತ್ತಿರ ಇರುವ ಭೌಗೋಳಿಕ, ತೈಲ ಶೋಧ ಪೂರ್ವ ತಾಂತ್ರಿಕ ಮಾಹಿತಿಗಳನ್ನು ಈ ಕಂಪನಿಗಳು ಪಡೆಯುತ್ತವೆ.

ಅಧಿಕಾರಶಾಹಿಯ ಮೇಲುಗೈ

ಈ ಪೆಟ್ರೋಲಿಯಂ ನೀತಿಯ ಬೆಳವಣಿಗೆಗೆ ಇನ್ನೊಂದು ಮುಖ ಇದೆ. ವಿದೇಶಿ ಕಂಪನಿಗಳೊಂದಿಗೆ ತೈಲ ಶೋಧದ ಕಾರ್ಯದಲ್ಲಿ ಸಾಮರಸ್ಯ ತರಲು ನಿಯಮಿಸಲಾಗುವ ವಿಶೇಷ ಡೈರೆಕ್ಟೊರೇಟ್‌ನಲ್ಲಿ ಅಧಿಕಾರಶಾಹಿಗಳು ತುಂಬಿರುತ್ತಾರೆ ಇವರಿಗೆ ಪೆಟ್ರೋಲಿಯಂನ, ತೈಲ ಶೋಧದ ಯಾವುದೇ ತಾಂತ್ರಿಕ ಜ್ಞಾನದ ಗಂಧ ಇರುವುದಿಲ್ಲ ಎಂದು ಬೇರೆ ಹೇಳ

ವಿದೇಶಿ ತೈಲ ಕಂಪನಿಗಳಿಗೆ ಆಮಂತ್ರಣ !

ಹಿತಾಸಕ್ತಿಗೆ ಧಕ್ಕೆ ತರುವ ಷರತ್ತುಗಳನ್ನು ಭಾರತ ವಿಧಿಸಬಾರದು. ಹೋಗಬಹುದಾದ, ಮತ್ತು ಅವುಗಳ ಅಲ್ಲದೆ ಈ ಕಂಪನಿಗಳು ಒಪ್ಪದೆ ತೈಲಶೋಧನೆಯ ಕಾರ್ಯದಲ್ಲಿ ವಿದೇಶಿ ಕಂಪನಿಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕೆಂದು ಸಹ ಖಾತೆ ಅಭಿಪ್ರಾಯಪಡುತ್ತದೆ. ಇದಕ್ಕೆ ಉನ್ನತ ವಲಯಗಳಿಂದ ಸಮ್ಮತಿ ಸಹ ದೊರೆತಿದೆ. ವೀರೇಂದ್ರ ಪಾಟೀಲರನ್ನು ಈ ಖಾತೆಯಿಂದ ವರ್ಗಮಾಡಿ ಪಿ. ಸಿ. ಸೇಠಿಯನ್ನು ಸಚಿವರಾಗಿ ನೇಮಿಸಿರುವುದಕ್ಕೂ ಈ ನಿರ್ಧಾರಕ್ಕೂ ಸಂಬಂಧ ಇದೆ ಎನ್ನಲಾಗಿದೆ, ವೀರೇಂದ್ರಪಾಟೀಲರು 'ಸಾಂಪ್ರದಾಯಿಕ' ನೀತಿಗಳಿಂದ ಪ್ರಭಾವಿತರಾಗಿದ್ದು ಇಂತಹ 'ದಿಟ್ಟ ನಿರ್ಧಾರ' ಕೈಗೊಳ್ಳುವ ಆತ್ಮವಿಶ್ವಾಸವಿಲ್ಲದ್ದರಿಂದ, ಇಂತಹ ಕೆಲಸಕ್ಕೆ ತಕ್ಕದಾದ ಪಿ ಸಿ. ಸೇಠಿಯವರನ್ನು ನಿಯಮಿಸಲಾಗಿದೆ ಎಂದು ತಿಳಿದು ಬಂದಿದೆ,

ಈಗಿರುವ ಪರಿಸ್ಥಿತಿಯಲ್ಲಿ ಭಾರತಕ್ಕೆ ಯಾವುದೇ ರೀತಿಯ ಚೌಕಾಶಿ ಮಾಡಲು ಅವಕಾಶವೇ ಇಲ್ಲ. ತೈಲ ಶೋಧನೆಯ ಫಲವಾಗಿ ಬರುವ ತೈಲಉತ್ಪನ್ನಗಳನ್ನು ಪಾಲುಮಾಡಿಕೊಳ್ಳುವ ಷರತ್ತಿಗೆ ಪೂರ್ವಭಾವಿಯಾಗಿ ಒಪ್ಪಿಗೆ ನೀಡುವುದರಿಂದ ತೈಲ ಕಂಪನಿಗಳೊಂದಿಗೆ ಮಾತುಕತೆಯಲ್ಲಿ ಚರ್ಚಾಸ್ಪದವಾಗಬಹುದಾದ ಇನ್ನೊಂದೇ ವಿಷಯವೆಂದರೆ ತೈಲ ಶೋಧನೆಯ ಕಾರ್ಯದಲ್ಲಿ ಒ.ಎನ್.ಜಿ.ಸಿ. (ತೈಲ ಮತ್ತು ನೈಸರ್ಗಿಕ ಅನಿಲ ಕಮಿಶನ್) ನಂತಹ ಭಾರತೀಯ ತೈಲಶೋಧನಾ ಸಂಸ್ಥೆಗಳ ಪಾತ್ರ. ಈ ಬಗ್ಗೆ ಸಹ ಪೆಟ್ರೋಲಿಯಂ ಖಾತೆ ಮಾತುಕತೆ ಆರಂಭವಾಗುವ ಮೊದಲೇ ವಿದೇಶೀ ಕಂಪನಿಗಳಿಗೆ ಒ.ಎನ್.ಜಿ.ಸಿ. ಈ ಕಾರ್ಯದಲ್ಲಿ ಯಾವುದೇ ರೀತಿಯಲ್ಲಿ ತಲೆ ಹಾಕುವುದಿಲ್ಲ ಎಂದು ಭರವಸೆ ನೀಡಿದೆ. ಈ ಕಂಪನಿಗಳಿಗೆ ನಿವೇಶನದಲ್ಲಿ ಬೇಕಾಗುವ ಸೌಲಭ್ಯಗಳನ್ನು ವ್ಯವಸ್ಥೆ ಮಾಡುವ ಕಾರ್ಯದಿಂದ ಸಹ ಒ.ಎನ್.ಜಿ.ಸಿ.ಯನ್ನು ದೂರವಿಡಲಾಗಿದೆ. ಈ ಕಾರ್ಯಗಳನ್ನು ನೋಡಿಕೊಳ್ಳಲು ಪೆಟ್ರೋಲಿಯಂ ಖಾತೆಯಲ್ಲಿ ಹೊಸ ನಿರ್ದೇಶನಾಲಯವನ್ನು ತೆರೆಯಲಾಗುವುದು.

ಹಂತಹಂತವಾಗಿ ಸ್ವಾವಲಂಬನೆ ನೀತಿ ಗಾಳಿಗೆ

ಈ ಹೊಸ ನೀತಿ 60 ದಶಕದ ತೈಲಶೋಧನೆಯ ಬಗೆಗಿನ ನೀತಿಯನ್ನು ಪೂರ್ಣವಾಗಿ ಗಾಳಿಗೆ ತೂರುವ ಮೂಲಕ ಬಂದಿದೆ. ಆಗಿನ ತೈಲಶೋಧನೆಯ ನೀತಿ : ತೈಲ ಪ್ರವೃತ್ತವಾದಲ್ಲೆಲ್ಲ, ತೈಲಶೋಧನೆ ಸಫಲವಾಗಿತ್ತು. ಅಸ್ಸಾಂನಲ್ಲಿ ತೈಲ ಶೋಧನೆ ಸಫಲತೆ ಇದಕ್ಕೆ ಒಳ್ಳೆಯ ಉದಾಹರಣೆ ಭಾರತ ಸರ್ಕಾರದ 50 ಶೇಕಡಾ ಷೇರು ಇದ್ದ ಆಯಿಲ್ ಇಂಡಿಯಾ ಕಂಪನಿಗೆ ಸಹ ಅಸ್ಸಾಂನಲ್ಲಿ ತೈಲಶೋಧನೆಯ ಪೂರ್ಣ ಜವಾಬ್ದಾರಿ ಕೊಟ್ಟಿರಲಿಲ್ಲ. ಒ.ಎನ್.ಜಿ.ಸಿ.ಯ ಮೇಲ್ವಿಚಾರಣೆ ಮತ್ತು ಜಂಟಿ ಕಾರ್ಯಾಚರಣೆ ಇರುವಂತೆ ಏರ್ಪಾಡು ಮಾಡಲಾಗಿತ್ತು. ಈ ನೀತಿ ಸಾಕಷ್ಟು ಫಲಕಾರಿಯಾಗಿತ್ತು ಎನ್ನಬಹುದು.

ಇಂತಹ ಹಲವು ಕಾರ್ಯಾಚರಣೆಗಳಿಂದ 70ರ ದಶಕದ ಆರಂಭದ ಹೊತ್ತಿಗೆ ಒ.ಎನ್.ಜಿ.ಸಿ. ಸಾಗರ ತಳದ ನಿವೇಶನಗಳಲ್ಲಿ ಬಿಟ್ಟು ಬೇರೆ ಯಾವುದೇ ನಿವೇಶನಗಳಲ್ಲಿ ತೈಲ ಶೋಧನೆ ನಡೆಸುವಷ್ಟು ತಾಂತ್ರಿಕ ಜ್ಞಾನ, ಪರಿಣತಿ, ಅನುಭವ ಪಡೆದಿತ್ತು. ಇದಕ್ಕೆ ಬೇಕಾಗಬಹುದಾದ ಕೆಲವು ವಿಶೇಷ ಉಪಕರಣಗಳು ಸೋವಿಯೆತ್ ರಷ್ಯಾದ ಇಂತಹುದೇ ಸಂಸ್ಥೆಯ ಜತೆ ತಾಂತ್ರಿಕ ಒಪ್ಪಂದದಿಂದ ಲಭ್ಯವಿತ್ತು,

ಮುಂಬಯಿಯ ಸಾಗರ ತಳದಲ್ಲಿ ತೈಲಶೋಧನೆಯ ಬಗ್ಗೆ ಸಹ, ಒ. ಎನ್. ಜಿ, ಸಿ. ಈ ಕಾರ್ಯಕ್ಕೆ ಸಿದ್ಧ

70ರ ದಶಕದ ಆರಂಭದಲ್ಲಿ ಜಗತ್ತಿನಾದ್ಯಂತ ತೈಲ ಬಿಕ್ಕಟ್ಟಿನಿಂದಾಗಿ ಈ ನೀತಿಯಲ್ಲಿ ಸಡಿಲತೆ ಮತ್ತು ಮಾರ್ಪಾಡುಗಳು ಆರಂಭವಾದವು. ಈ ಸಡಿಲಿಕೆ, ಮಾರ್ಪಾಡಿಗೆ ತೈಲ ಬಿಕ್ಕಟ್ಟು ನಿಜವಾದ ಕಾರಣವೇ ಅಥವಾ ಬರಿಯ ನೆಪವೇ ಹೇಳುವುದು ಕಷ್ಟ. ಈ ಮಾರ್ಪಟ್ಟ ನೀತಿಯ ಪ್ರಕಾರ ಸಾಗರ ತಳದಲ್ಲಿ ತೈಲ ಶೋಧನೆಯನ್ನು ವಿದೇಶಿ ಕಂಪನಿಗಳ ನಿರ್ವಹಣೆಗೆ ಬಿಡಲು ನಿರ್ಧರಿಸಲಾಯಿತು. ಆದಾಗ್ಯೂ, ಕೆಲವು ಷರತ್ತುಗಳು, ನಿಯಂತ್ರಣ ಇದ್ದವು. ದೊಡ್ಡ ಕಂಪನಿಗಳನ್ನು ದೂರವಿಡಲಾಗಿತ್ತು. ಜಗತ್ತಿನಲ್ಲೆಲ್ಲಾ ತೈಲದ ಪೂರೈಕೆ, ಶೋಧ, ಬೆಲೆಗಳನ್ನು ನಿಯಂತ್ರಿಸುವ ಅಂತರಾಷ್ಟ್ರೀಯ ತೈಲ ಕೂಟಕ್ಕೆ ಸೇರದ ಕಂಪನಿಗಳನ್ನು ಅವಲಂಬಿಸಲಾಯಿತು. ಈ ತೈಲಶೋಧದಲ್ಲಿ ಒ ಎನ್ ಜಿ ಸಿ ಈ ಕಂಪನಿಗಳೊಂದಿಗೆ ಜಂಟಿ ಕಾರ್ಯದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಲಾಯಿತು. ಈ ಕಾರ್ಯಚರಣೆಯಲ್ಲಿ ದೊರೆಯುವ ತಾಂತ್ರಿಕ ಮಾಹಿತಿ, ಅಂಕಿ ಸಂಖ್ಯೆಗಳನ್ನು ಒ.ಎನ್.ಜಿ ಸಿ. ಪಡೆಯುವ ಹಕ್ಕನ್ನು ಒತ್ತಿಹೇಳಲಾಯಿತು. ಅಷ್ಟೇ ಅಲ್ಲದೆ ವಿದೇಶಿ ಕಂಪನಿಗಳು ಉದ್ದೇಶಪೂರ್ವಕವಾಗಿ ತೈಲ ಶೋಧನೆಯ ಕೆಲಸ ವಿಳಂಬಿಸಿದರೆ, ಅಥವಾ ಸಮರ್ಪಕವಾಗಿ ನಿರ್ವಹಿಸದಿದ್ದರೆ ಈ ಕಂಪನಿಗಳನ್ನು ಹಿಂದೆ ಕಳಿಸುವ ಷರತ್ತು ಸಹ ಹಾಕಲಾಗಿತ್ತು.

ಬೇಕಾಗಿಲ್ಲ. ಆದ್ದರಿಂದ ವಿದೇಶಿ ಕಂಪನಿಗಳೊಂದಿಗೆ ಈ ಜಂಟಿ ಕಾರ್ಯಚರಣೆಯ ನಂತರವೂ ಭಾರತೀಯರ ತಾಂತ್ರಿಕ ಕುಶಲತೆ, ಆತ್ಮವಿಶ್ವಾಸ ಹೆಚ್ಚಿದ ಹಾಗೂ ಆಗುವುದಿಲ್ಲ.

ಈ ನೀತಿ ಜಾರಿಗೆ ತರುವ ಮೂಲಕ ಸಚಿವ ಖಾತೆಯ ಅಧಿಕಾರಶಾಹಿ, ತಾಂತ್ರಿಕ ತಜ್ಞರ ಮೇಲೆ ತನ್ನ ಮೇಲುಗೈಯನ್ನು ಪುನಃ ಸ್ಥಾಪಿಸಿದೆ. ಎಲ್ಲಾ ಸಚಿವ ಖಾತೆಗಳಲ್ಲೂ ನಡೆಯುತ್ತಿರುವ ಅಧಿಕಾರಶಾಹಿ ಹಾಗೂ ತಾಂತ್ರಿಕ ಶಾಹಿಗಳ (Technocrat) ಸೆಣಸಾಟದಲ್ಲಿ ಗದ್ದಿದೆ.

ಈ ತನ್ನ ನೀತಿಗೆ ತಾಂತ್ರಿಕ ತಜ್ಞರಿಂದ ಅದರಲ್ಲೂ ಮುಖ್ಯವಾಗಿ ಒ. ಎನ್.ಜಿ.ಸಿ.ಯ ತಾಂತ್ರಿಕ ತಜ್ಞರಿಂದ ವಿರೋಧ, ಆಕ್ಷೇಪ ಬರದಂತೆ, ಒ.ಎನ್.ಜಿ.ಸಿ.ಯ ಅಧಿಕಾರಿ ವರ್ಗ ಅದರಲ್ಲೂ ತಾಂತ್ರಿಕ ಅಧಿಕಾರಿ ವರ್ಗ ಮತ್ತು ಪ್ರಮುಖರನ್ನು ಅಧ್ಯಕ್ಷರು ನಿರುಪಯೋಗಿಗಳು, ಅಸಮರ್ಥರು ಎಂದು ಪ್ರಚಾರ ಮಾಡಲಾಗುತ್ತಿದೆ.

ಮೇಲೆ ವಿವರಿಸಿರುವ ಈ ನೀತಿಗೆ ಒ. ಎನ್. ಜಿ, ಸಿ.ಯ ತಾಂತ್ರಿಕ ಅಧಿಕಾರ ವರ್ಗದಿಂದ ತೀವ್ರ ವಿರೋಧ,

(6ನೇ ಪುಟ ನೋಡಿ)

ಹದಿನೆಂಟು ವರುಷಗಳಿಂದ ಫ್ಯಾಸಿಸ್ಟ್ ಜೈಲಿನಲ್ಲಿರುವ

ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ ನಾಯಕ ನೆಲ್ಸನ್ ಮ್ಯಾಂಡೆಲಾ

"ಕಾಮ್ರೇಡ್ ನೆಲ್ಸನ್ ಮ್ಯಾಂಡೆಲಾರನ್ನು ಬಿಡುಗಡೆಗೊಳಿಸಿ" ಎಂಬ ಕೂಗು ದಕ್ಷಿಣ ಆಫ್ರಿಕಾದ ಉದ್ದಗಲದಲ್ಲಿ ಮೊಳಗುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಮಾತ್ರವಲ್ಲ ಇತ್ತೀಚಿನ ವರ್ಷಗಳಲ್ಲಿ ವಸಾಹತುಶಾಹಿಯಿಂದ ವಿಮೋಚನೆ ಪಡೆದ ನೆರೆಯ ದೇಶಗಳಾದ ಅಂಗೋಲಾ, ಮೊಜಾಂಬಿಕ್ ಹಾಗೂ ಜಿಂಬಾಬ್ವೆಯಲ್ಲಿ, ದಕ್ಷಿಣ ಆಫ್ರಿಕಾದ ವರ್ಣದ್ವೇಷೀ ಬಿಳಿಯರ ಆಕ್ರಮ ಆಳ್ವಿಕೆಯಿಂದ ವಿಮುಕ್ತಿಗಾಗಿ ಹೋರಾಡುತ್ತಿರುವ ನಮೀಬಿಯಾದಲ್ಲಿ ಹಾಗೂ ವರ್ಣದ್ವೇಷ ನೀತಿಯ ವಿರುದ್ಧ ಜಗತ್ತಿನಾದ್ಯಂತ (ಬ್ರಿಟನ್, ಅಮೇರಿಕಾವೂ ಸೇರಿದಂತೆ) ಹಲವು ದೇಶಗಳಲ್ಲಿ ನಡೆಯುತ್ತಿರುವ ಚಳುವಳಿಗಳಲ್ಲಿಯೂ ಈ ಒತ್ತಾಯ ಕೇಳಿಬರುತ್ತಿದೆ. ಆದರೆ ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಜನಾಂಗದ್ವೇಷೀ ಬಿಳಿಯರ ಸರಕಾರದ ಪ್ರಧಾನಮಂತ್ರಿ ಬೋಥಾ ಕಿವಿ ಮುಚ್ಚಿ ಕೂತಿದ್ದಾನೆ. ಏಕೆಂದರೆ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳು, ಅವರ ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಶಸ್ತ್ರಾಸ್ತ್ರ ಕೈಗಾರಿಕಾ ಸಂಸ್ಥೆಗಳ ಬೆಂಬಲದಿಂದ ಬಹುಸಂಖ್ಯಾತ ಕರಿಯರ ಹಾಗೂ ಜಗತ್ತಿನ ಪ್ರಜಾಪ್ರಭುತ್ವವಾದಿಗಳ ಒಕ್ಕೊರಲಿನ ಕೇಳಿಕೆಯನ್ನು ಸುಲಭವಾಗಿ ನಿರ್ಲಕ್ಷಿಸಬಹುದೆಂದು ಆತನ ನಂಬಿಕೆ.

ಶೇಕಡಾ 80ರಷ್ಟಿರುವ ದಕ್ಷಿಣ ಆಫ್ರಿಕಾದ ಕರಿಯರು ತಮ್ಮ ನೆಲದಲ್ಲೇ ಪರಕೀಯರಾಗಿ, ಜಗತ್ತಿನ ಮುಕ್ಕಾಲು ಪಾಲು ಬಂಗಾರ, ವಜ್ರ, ಪ್ಲೇಟಿನಂನ್ನು ಒದಗಿಸುವ ಸಮೃದ್ಧ ಸಂಪನ್ಮೂಲದ ದೇಶದಲ್ಲಿ ದಟ್ಟದರಿದ್ರರಾಗಿ ಯಾವ ನಾಗರಿಕ ಸೌಲಭ್ಯವೂ ಅಧಿಕಾರವೂ ಇಲ್ಲದೆ ಬದುಕು ಸಾಗಿಸಬೇಕಾದ ವಿಚಿತ್ರ ಪರಿಸ್ಥಿತಿಯಲ್ಲಿದ್ದಾರೆ. ಮೂರು ಶತಮಾನಗಳ ಹಿಂದೆ ಹಾಲೆಂಡ್ ಹಾಗೂ ಬ್ರಿಟನ್ನಿನಿಂದ ಬಂದು ನೆಲೆಸಿದ ವಲಸೆಗಾರ ಬಿಳಿಯರು ದಕ್ಷಿಣ ಆಫ್ರಿಕಾದ 17%ರಷ್ಟು ಮಾತ್ರ ಇರುವುದು. ಆದರೆ ಈ 17% ಬಿಳಿಯರು ಆಳಿಸಿದ "ಗಣರಾಜ್ಯ" ದಕ್ಷಿಣ ಆಫ್ರಿಕಾ. ವರ್ಣದ್ವೇಷ ಈ 'ಗಣರಾಜ್ಯ'ದ ಅಧಿಕೃತ ನೀತಿ.

ಅನ್ಯಾಯದ ವಿರುದ್ಧ ಹೋರಾಟ


ಈ ಅನ್ಯಾಯ, ಅಪಮಾನವೀಯತೆಯ ವಿರುದ್ಧ ಹೋರಾಟ ನಡೆಸಿದ್ದಕ್ಕಾಗಿ ನೆಲ್ಸನ್ ಮ್ಯಾಂಡೆಲಾ ಹಾಗೂ ಅವರ ಇತರ ಸಹಯೋಗಿಗಳನ್ನು ಅಲ್ಪಸಂಖ್ಯಾತ ಜನಾಂಗದ್ವೇಷೀ ಬಿಳಿಯರ ಸರಕಾರ "ದೇಶದ್ರೋಹ"ದ ಅಪಾದನೆಯ ಮೇಲೆ 1962ರಲ್ಲಿ ಜೈಲಿಗೆ ತಳ್ಳಿತು. ಮ್ಯಾಂಡೆಲಾರಿಗೆ ಆಜೀವ ಕಾರಾವಾಸ ವಿಧಿಸಿತು. ಅಂದಿನಿಂದ ಇಂದಿನವರೆಗೆ ಅವರು ತಮ್ಮ ಸಹಕೈದಿಗಳೊಂದಿಗೆ ಕಲ್ಲು ಕುಟ್ಟುತ್ತಾ, ವರ್ಣದ್ವೇಷೀ ಜೈಲು ವಾರ್ಡರುಗಳ ವಿರುದ್ಧ ಹೋರಾಡುತ್ತಾ, ತಮ್ಮ ಸಹಕೈದಿಗಳನ್ನು ವಾರ್ಡರುಗಳ ಗೇಲಿ, ಉಪಟಳ ಹಾಗೂ ಫ್ಯಾಸಿಸ್ಟ್ ಹಿಂಸೆಯಿಂದ ರಕ್ಷಿಸುತ್ತಾ ಕಳೆಯುತ್ತಿದ್ದಾರೆ. ಅವರಿಗೆ ರಾಜಕೀಯ ಕೈದಿಯ ಸ್ಥಾನಮಾನವನ್ನೂ ಕೊಟ್ಟಿಲ್ಲ.

ಮ್ಯಾಂಡೆಲಾ ದಕ್ಷಿಣ ಆಫ್ರಿಕಾದ ಬಹುಸಂಖ್ಯಾತ ಕರಿಯರ ಆದರ್ಶಗಳ ಹಾಗೂ ಆಶೋತ್ತರಗಳ ಜೀವಂತ ಪ್ರತೀಕವಾಗಿದ್ದಾರೆ. ಅಲ್ಲದೆ ಕರಿಯರು, ವರ್ಣೀಯರು (ಮಿಶ್ರ ಜನಾಂಗ), ದಕ್ಷಿಣ ಆಫ್ರಿಕಾದ ಭಾರತೀಯರು ಮತ್ತು ಪ್ರಜಾಪ್ರಭುತ್ವವಾದೀ ಬಿಳಿಯರು ಇತ್ಯಾದಿ ಎಲ್ಲಾ ಕ್ರಾಂತಿಕಾರಿ ಶಕ್ತಿಗಳ ನಾಯಕರಾಗಿದ್ದಾರೆ. ಆದ್ದರಿಂದಲೇ ದಕ್ಷಿಣ ಆಫ್ರಿಕಾದ ಜನಸಾಮಾನ್ಯರಿಗೆ ಅವರ ಮೇಲೆ ಅಗಾಧ ಗೌರವ ಹಾಗೂ ಪ್ರೀತಿ; ಮತ್ತು ವರ್ಣದ್ವೇಷಿ ಅಲ್ಪಸಂಖ್ಯಾತ ಬಿಳಿಯರಿಗೆ ಎಲ್ಲಿಲ್ಲದ ಭಯ. 1962ರಲ್ಲಿ ಅವರ ಬಂಧನವಾಗುವ ಹೊತ್ತಿಗೆ ಅವರ ಹೋರಾಟಗಳು ದಕ್ಷಿಣ ಆಫ್ರಿಕಾ ಹಾಗೂ ಬೇರೆ ದೇಶಗಳಲ್ಲಿ ಮನೆಮಾತಾಗಿಬಿಟ್ಟಿದ್ದವು. ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದಲ್ಲಿ ಅವರು ವಹಿಸಿದ ವಿಶಿಷ್ಟ ಪಾತ್ರವೇ ಇದಕ್ಕೆ ಕಾರಣ.

1910ರಲ್ಲಿ ಡಚ್ ಹಾಗೂ ಬ್ರಿಟಿಷ್ ವಲಸೆಗಾರರು ಸೇರಿ ಮಾಡಿಕೊಂಡ "ದಕ್ಷಿಣ ಆಫ್ರಿಕಾದ ಸಂಘ"ಕ್ಕೆ ಬ್ರಿಟಿಷ್ ಸರಕಾರ "ಸ್ವಾತಂತ್ರ್ಯ" ದಯಪಾಲಿಸಿತು. ಆದರೆ ಇದನ್ನು 'ಸ್ವಾತಂತ್ರ್ಯ'ವೆಂದು ಈ ವಲಸೆಗಾರರನ್ನು ಬಿಟ್ಟು ಬೇರೆ ಯಾರೂ ಒಪ್ಪಲಿಲ್ಲ. ಬದಲಿಗೆ, ಇದರಿಂದಾಗಿ ವಸಾಹತುಶಾಹಿಯ ಎಲ್ಲಾ ಅನಿಷ್ಟಗಳು ಇನ್ನಷ್ಟು ತೀವ್ರವಾಯಿತು ಎಂಬುದನ್ನು ಬಹುಸಂಖ್ಯಾತ ಕರಿಯರು ಬಹಬೇಗನೇ ಅರಿತರು. ಈ ಅರಿವಿನಿಂದಾಗಿ ಆಫ್ರಿಕಾದ ಜನಸಾಮಾನ್ಯರನ್ನು ಒಗ್ಗೂಡಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಉದ್ದೇಶದಿಂದ 1912ರಲ್ಲಿ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್-ದಕ್ಷಿಣ ಆಫ್ರಿಕಾ (African National Congress) ಹುಟ್ಟಿಕೊಂಡಿತು.

ಎ.ಎನ್.ಸಿ.ಗೆ ಹೊಸರೂಪ

ವರ್ಷಗಳುರುಳಿದಂತೆ ವಸಾಹತುಶಾಹಿಯ, ಸಾಮ್ರಾಜ್ಯಶಾಹಿಯ ರೂಪ ಬದಲಾದಂತೆ, ಜಗತ್ತಿನ ರಾಜಕಾರಣದಲ್ಲಿ ಸಮಾಜವಾದಿ ದೇಶಗಳ ಉದಯದಿಂದಾಗಿ ಬಂದ ಅಗಾಧ ಬದಲಾವಣೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ANCಯು ಜವಾಬ್ದಾರಿ ಹಾಗೂ ವಿಸ್ತಾರಗೊಳ್ಳಲಾರಂಭಿಸಿತು. ಕೇವಲ ಆಫ್ರಿಕನ್ನರ ಸಂಘಟನೆಯಾದ ಅದರ ಹೆಗಲ ಮೇಲೆ ಕ್ರಮೇಣ ಆಫ್ರಿಕನ್ನರು ಮಾತ್ರವಲ್ಲ ವರ್ಣೀಯರು, ಭಾರತೀಯರು ಇತ್ಯಾದಿ ಜನಾಂಗಗಳಿಗೆ ಸೇರಿದ ದಲಿತರನ್ನು ಸಂಘಟಿಸಿ ಪ್ರಜಾಪ್ರಭುತ್ವವಾದೀ ಬಿಳಿಯರನ್ನು ತನ್ನತ್ತ ಸೆಳೆದುಕೊಳ್ಳುವ ಹೊಣೆ ಬೀಳಲಾರಂಭಿಸಿತು. ಇದನ್ನು ANC ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಅದನ್ನು ಆಧುನೀಕರಿಸಿ, ಸಂಘಟನಾತ್ಮಕ ಸುಧಾರಣೆಗಳನ್ನು ಕೈಗೊಂಡು ಅದಕ್ಕೊಂದು ಕ್ರಾಂತಿಕಾರೀ ಸಿದ್ಧಾಂತ ರೂಪಿಸಿ, ಕ್ರಾಂತಿಕಾರೀ ಹೋರಾಟದ ನೀತಿ



ಯನ್ನು ಅಂಗೀಕರಿಸುವಂತೆ ಮಾಡುವಲ್ಲಿ ಮ್ಯಾಂಡೆಲಾ ಹಾಗೂ ಅವರ ಕಾಮ್ರೇಡ್‌ಗಳ ದೂರದರ್ಶಿತ್ವ ಮತ್ತು ಜನಸಾಮಾನ್ಯರೊಂದಿಗೆ ಅವರಿಗಿದ್ದ ಅಗಾಧ ಸಾಮೀಪ್ಯ ಇವು ಮಹತ್ತರ ಪಾತ್ರ ವಹಿಸಿದವು. ಮ್ಯಾಂಡೆಲಾ ಹಾಗೂ ಅವರ ಸಹೋದ್ಯೋಗಿಗಳ ಎಡೆಬಿಡದ ಪ್ರಯತ್ನಗಳಿಂದಾಗಿ ANC ಈಗ ನಿಜವಾದ ಅರ್ಥದಲ್ಲಿ ಜನಸಾಮಾನ್ಯರ ಸಂಘಟನೆಯಾಗಿದೆ.

62 ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದ ಒಂದು ಬಡವ ಮುಖ್ಯಸ್ಥನ ಪರಿವಾರದಲ್ಲಿ ಹುಟ್ಟಿದ ನೆಲ್ಸನ್ ರೋಲಿಹ್‌ಲಾಹ್ಲಾ ಮ್ಯಾಂಡೆಲಾ ಫೋರ್ಟ್‌ಹೇರ್‌ನ ವಿಶ್ವವಿದ್ಯಾಲಯ ಕಾಲೇಜಿನಿಂದ ಹಾದು ಜೋಹಾನ್ಸ್‌ಬರ್ಗ್‌ನ ಕೈಗಾರಿಕಾ ಕೇಂದ್ರದಲ್ಲಿ ನೆಲೆಸಿದರು. ಅಲ್ಲಿಂದಲೇ ಅದ್ವಿತೀಯ ಜನನಾಯಕರಾಗಿ ಜಗತ್ತಿನ ಕ್ರಾಂತಿಕಾರೀ ಶಕ್ತಿಗಳ ಗಮನ ಸೆಳೆದರು. 1944ರಲ್ಲಿ ತಮ್ಮ ಇತರ ಕಾಮ್ರೇಡುಗಳಾದ ಸಿಸುಲು, ತಾಂಬೋ ಇತ್ಯಾದಿಯವರೊಡಗೂಡಿ ANC ಯೂತ್‌ಲೀಗ್ ಸ್ಥಾಪಿಸಿದರು. ಅಮೇಲೆ ನಡೆದ ಪ್ರತಿಯೊಂದು ಜನ ಹೋರಾಟದಲ್ಲಿ ಮ್ಯಾಂಡೆಲಾ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗಿದ್ದರು. 1948ರಲ್ಲಿ ನಡೆದ ಗಣಿ ಕಾರ್ಮಿಕರ ಮುಷ್ಕರ, 1950ರ ಮೇ ದಿನದ ರ್‍ಯಾಲಿಗಳು, 1952ರ ನಿರಾಕರಣ ಚಳುವಳಿ ಇತ್ಯಾದಿ ಎಲ್ಲದರಲ್ಲೂ ಅವರು ಪಾತ್ರವಹಿಸಿದರು. ANC ಕಾರ್ಯಾಚರಣೆಗಳಿಗೆ ಒಂದು ಸ್ಪಷ್ಟ ರಾಜಕೀಯ ಹಾಗೂ ಸೈದ್ಧಾಂತಿಕ ಆಧಾರ ರೂಪಿಸಬೇಕಾದ ಅಗತ್ಯ ಬಂದಾಗ ANC 1956ರಲ್ಲಿ ಸ್ವಾತಂತ್ರ್ಯದ ಮಹಾಪತ್ರ ಅಥವಾ Freedom Charterನ್ನು ಅಂಗೀಕರಿಸಿತು. ಈ ಮಹಾಪತ್ರ ಭವಿಷ್ಯದ ದಕ್ಷಿಣ ಆಫ್ರಿಕಾದ ನೀಲನಕ್ಷೆಯಾಗಿತ್ತು; ಜನರ ಸಾಮೂಹಿಕ ಅನುಭವ ಹಾಗೂ ಬುದ್ಧಿವಂತಿಕೆಯ ಅಭಿವ್ಯಕ್ತಿಯಾಗಿತ್ತು. ಈ ಚಾರಿತ್ರಿಕ ನಿರ್ಧಾರದಲ್ಲೂ ಮ್ಯಾಂಡೆಲಾರವರ ಪಾತ್ರ ಮಹತ್ತರವಾದದ್ದು.

ದ. ಆಫ್ರಿಕಾದ ಕ್ರಾಂತಿ ಆಫ್ರಿಕಾ ಖಂಡದ ಕ್ರಾಂತಿಯ ಅಭಿನ್ನ ಅಂಗ

ಮ್ಯಾಂಡೆಲಾ ಆಫ್ರಿಕಾ ಖಂಡದಾದ್ಯಂತ ಪ್ರವಾಸ ಮಾಡಿ ಪ್ರಮುಖ ಆಫ್ರಿಕನ್ ನಾಯಕರಾದ ನೈರೇರೆ, ಹೈಲೀ ಸೆಲಾಸಿ, ಒಬೋಟೆ, ಕೌಂಡಾ ಎನ್ಕ್ರೂಮಾ, ಬಡಿಂಗಾ ಇತ್ಯಾದಿ ಹಲವರನ್ನು ಭೇಟಿ ಮಾಡಿ ವಿಚಾರ ವಿಮರ್ಶೆ ಮಾಡಿದರು. ಈ ಪ್ರವಾಸದ ನಂತರ ದಕ್ಷಿಣ ಆಫ್ರಿಕಾದ ಸದ್ಯದ ಸ್ಥಿತಿ ಹಾಗೂ ಭವಿಷ್ಯದ ಹೋರಾಟದ ಬಗ್ಗೆ ಅವರು ಖಚಿತ ವಿಚಾರಗಳನ್ನು ರೂಪಿಸಿಕೊಂಡರು. "ಹಿಂದಿನ ಎಲ್ಲಾ ವಸಾಹತು ಪ್ರದೇಶಗಳಂತೆ ದಕ್ಷಿಣ ಆಫ್ರಿಕಾದ ಹೋರಾಟದ ಸದ್ಯದ ಹಂತವೆಂದರೆ ವಸಾಹತುಶಾಹಿಯಿಂದ ಬಿಡುಗಡೆ. ಆಫ್ರಿಕನ್ ಹಾಗೂ ಇತರ ರಾಷ್ಟ್ರೀಯವಾದಿ ಶೋಷಣೆಗೊಳಗಾದ ಕರಿಯ ಜನಾಂಗದ ರಾಷ್ಟ್ರೀಯ ವಿಮೋಚನಾ ಹೋರಾಟ ಇದರ ಮುಖ್ಯ ಅಂಶ. ದಕ್ಷಿಣ ಆಫ್ರಿಕಾದ ಕ್ರಾಂತಿ ಇಡಿಯ ಆಫ್ರಿಕಾ ಖಂಡದ ಕ್ರಾಂತಿಯ ಒಂದು ಆಯಾಮ ಹಾಗೂ ಅವರ ಅಭಿನ್ನ ಅಂಗ. ಈ ಕ್ರಾಂತಿ ಆಫ್ರಿಕಾದ ಎಲ್ಲಾ ದೇಶಗಳಲ್ಲೂ ಒಂದೇ ರೀತಿಯಲ್ಲಿ ಆಗಲಿಕ್ಕಿಲ್ಲ. ಉದಾಹರಣೆಗೆ ದಕ್ಷಿಣ ಆಫ್ರಿಕಾದಲ್ಲಿ ಖಂಡದ ಉಳಿದೆಡೆಗಿಂತ ಹೆಚ್ಚು ಅಭಿವೃದ್ಧಿ ಹೊಂದಿದ ಕೈಗಾರಿಕೆ ಮತ್ತು ತಂತ್ರಜ್ಞಾನವಿದೆ; ಶಕ್ತಿಶಾಲೀ ಕಾರ್ಮಿಕ ವರ್ಗವಿದೆ. ದ. ಆಫ್ರಿಕಾದ ರಾಷ್ಟ್ರೀಯ ಮುಕ್ತಿ ಹೋರಾಟದಲ್ಲಿ ಕಾರ್ಮಿಕ ವರ್ಗದ ನಾಯಕತ್ವವನ್ನು ಎಲ್ಲಾ ಸಾಚಾ ಕ್ರಾಂತಿಕಾರಿಗಳು ಹಾಗೂ ದೇಶಭಕ್ತರು ಸ್ವೀಕರಿಸಿದ್ದಾರೆ. ಅಲ್ಲದೆ ಆಫ್ರಿಕಾ ಖಂಡದಲ್ಲಿ ಬೇರೆ ಸರಿಸಾಟಿಯಿಲ್ಲದ ಅನುಭವ ಪಡೆದ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷವಿದೆ. ಇವೆಲ್ಲಾ ಅಂಶಗಳನ್ನು ಗಮನಿಸಿದರೆ ನಿಜವಾದ ವಿಮೋಚನೆಯಾಗಬೇಕಾದರೆ ಅದು ಗುತ್ತೇದಾರಿ ಬಂಡವಾಳಶಾಹಿಯನ್ನು ನಿರ್ನಾಮ ಮಾಡಿದಾಗ ಮಾತ್ರ ಸಾಧ್ಯ."

ಈ ವಿಚಾರಗಳು 'ಸ್ವಾತಂತ್ರ್ಯ ಮಹಾಪತ್ರ'ದಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿವೆ. ದಕ್ಷಿಣ ಆಫ್ರಿಕಾದ ಕಾರ್ಮಿಕರು, ರೈತರು, ಹೆಂಗಸರು ಹಾಗೂ ಯುವಜನರು, ದಕ್ಷಿಣ ಆಫ್ರಿಕಾದ ಭಾರತೀಯ ಜನಾಂಗ ಹಾಗೂ ವರ್ಣೀಯರು, ಕಮ್ಯುನಿಸ್ಟರು ಹಾಗೂ ಕಮ್ಯುನಿಸ್ಟೇತರ ದೇಶಭಕ್ತರು ಹೀಗೆ ಎಲ್ಲರನ್ನೂ ಒಗ್ಗೂಡಿಸಿ, ಅಲ್ಪಸಂಖ್ಯಾತ ವರ್ಣದ್ವೇಷೀ ಬಿಳಿಯರ ಸರಕಾರದ ವಿರುದ್ಧ ಪ್ರಜಾಪ್ರಭುತ್ವವಾದೀ ಸಂಯುಕ್ತರಂಗವೊಂದನ್ನು ಕಟ್ಟುವಲ್ಲಿ ಮ್ಯಾಂಡೆಲಾರವರು ಮಾಡಿದ ಅದ್ವಿತೀಯ ಪ್ರಯತ್ನ ದಕ್ಷಿಣ ಆಫ್ರಿಕಾದ ಕ್ರಾಂತಿಗೆ ಅವರು ಸಲ್ಲಿಸಿದ ಮುಖ್ಯ ಕಾಣಿಕೆಗಳಲ್ಲೊಂದು. ಅವರ ಪ್ರಯತ್ನದ ಫಲವಾಗಿ ಈಗ ದಕ್ಷಿಣ ಆಫ್ರಿಕಾದ ಪ್ರಜಾಪ್ರಭುತ್ವವಾದಿಗಳು ANCಯ "ಸ್ವಾತಂತ್ರ್ಯ ಮಹಾಪತ್ರ"ವನ್ನು ಒಪ್ಪಿಕೊಂಡು ಅದರ ಬಾವುಟದ ಕೆಳಗೆ ಒಗ್ಗಟ್ಟಾಗಿದ್ದಾರೆ.

ಸಶಸ್ತ್ರ ಹೋರಾಟದ ನಾಯಕ

1960ರಲ್ಲಿ ದಕ್ಷಿಣ ಆಫ್ರಿಕಾದ ಜನರು ವರ್ಣದ್ವೇಷಿಗಳ ದಬ್ಬಾಳಿಕೆಯನ್ನು ಸಹಿಸಲಾರದೆ ಅಲ್ಲಲ್ಲಿ ಪ್ರತಿಭಟನೆ ಸೂಚಿಸಲು ಆರಂಭಿಸಿದರು. ಇಂತಹ ಒಂದು ಪ್ರತಿಭಟನೆ ಮುಂದೆ ಜಗತ್ತಿನ ಗಮನಸೆಳೆಯಿತು. ಶಾರ್ಪ್‌ವಿಲೆಯೆಂಬಲ್ಲಿ ಶಾಂತಿಯುತ ಪ್ರತಿಭಟನೆಯಲ್ಲಿ ತೊಡಗಿದ್ದ ಜನರ ಮೇಲೆ ಪೋಲೀಸರು ಗುಂಡಿನ ಸುರಿಮಳೆ ಸುರಿಸಿದರು. ಈ ಹತ್ಯಾಕಾಂಡದಲ್ಲಿ 67 ಜನ ಕೊಲೆಯಾದರು; 180

(6ನೇ ಪುಟ ನೋಡಿ)

ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ ನಾಯಕ ನೆಲ್ಸನ್ ಮ್ಯಾಂಡೆಲಾ

(5ನೇ ಪುಟದಿಂದ)

ಜನ ಗಾಯಗೊಂಡರು. ಇಂತಹ ಪ್ರತಿಭಟನೆಗಳಿಂದ ಭಯಗೊಂಡ ಬಿಳಿಯ ಸರಕಾರ ಎ.ಎನ್.ಸಿ.ಯ ಮೇಲೆ ಬಹಿಷ್ಕಾರ ಹೇರಿತು. ಪರಿಣಾಮವಾಗಿ ಎ.ಎನ್.ಸಿ ತನ್ನ ಕಾರ್ಯಾಚರಣೆಯನ್ನು ಗುಪ್ತವಾಗಿ ಮುಂದುವರಿಸಬೇಕಾಯಿತು. ಕೇವಲ ಸಿದ್ಧಾಂತ ಮಾತ್ರವಾಗಿರದೆ ತನ್ನ ಸಿದ್ಧಾಂತವನ್ನು ಯಾವಾಗಲೂ ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುತ್ತಿದ್ದ ಮ್ಯಾಂಡೆಲಾ ಈ ವಿಷಮ ಪರಿಸ್ಥಿತಿಯಲ್ಲಿ ಎ.ಎನ್.ಸಿ.ಯನ್ನು ಸಮರ್ಥವಾಗಿ ಮುನ್ನಡೆಸಿದರು. ಅದರ ಫಲವಾಗಿ ಎ.ಎನ್.ಸಿ.ಯ ಸೈನಿಕ ವಿಭಾಗ ಸ್ಥಾಪಿಸಲಾಯಿತು. ಈ ಜನತಾ ಸೇನೆಯ ಹೆಸರು "ಉಮ್‌ಕೊಂಟೋವಿ ಸಿಜ್ವೆ" ಅಥವಾ "ರಾಷ್ಟ್ರದ ಈಟಿ". ಮ್ಯಾಂಡೆಲಾ ಈ ಮುಕ್ತಿಸೇನೆಯ ಸೇನಾಧಿಪತಿಯಾದರು. ಈ ರೀತಿ ದಕ್ಷಿಣ ಆಫ್ರಿಕಾದ ವಿಮೋಚನೆ ಹೋರಾಟಕ್ಕೆ ಸಶಸ್ತ್ರ ಹೋರಾಟದ ಹೊಸ ಆಯಾಮ ದೊರಕಿತು. ಸಶಸ್ತ್ರ ಗೆರಿಲ್ಲಾ ಹೋರಾಟ ನಡೆಸಬೇಕಾದ ಸಂದರ್ಭ ಬರಬಹುದೆಂದು ಮ್ಯಾಂಡೆಲಾ ಮೊದಲೇ ನಿರೀಕ್ಷಿಸಿ ಅದಕ್ಕೆ ಸಿದ್ಧವಾಗಿದ್ದರು. ಆಫ್ರಿಕಾ ಖಂಡದ ಪ್ರವಾಸದಲ್ಲಿದ್ದಾಗ ಸೈನಿಕ ತರಬೇತಿಯನ್ನೂ ಪಡೆದಿದ್ದರು. "ಗೆರಿಲ್ಲಾ ಯುದ್ಧ ನಡೆದರೆ ನಾನೂ ನನ್ನ ಜನರೊಂದಿಗೆ ಭುಜಕ್ಕೆ ಭುಜಕೊಟ್ಟು ಹೋರಾಡಬೇಕು, ಯುದ್ಧದ ಸಂಕಷ್ಟಗಳಲ್ಲಿ ಅವರೊಂದಿಗೆ ಪಾಲುಗೊಳ್ಳಬೇಕು ಎಂಬ ಇಚ್ಛೆಯಿಂದ ಯುದ್ಧವಿದ್ಯೆಯ ಅಧ್ಯಯನ ಮಾಡಿದೆ" ಎಂದು ಅವರು ಬಿಳಿಯರ ಫ್ಯಾಸಿಸ್ಟ್ ನ್ಯಾಯಾಲಯದೆದುರು ನಿರ್ಭಯವಾಗಿ ಹೇಳಿ ಕೊಟ್ಟಿದ್ದರು. ನೆರೆಯ ಟಾಂಗಾನಿಕಾದಲ್ಲಿ ಸೈನಿಕ ತರಬೇತಿಗಾಗಿ ವ್ಯವಸ್ಥೆಯೂ ಮಾಡಿದ್ದರು. ಮ್ಯಾಂಡೆಲಾ ತನ್ನ ದೇಶದ ವಿಮೋಚನಾ ಹೋರಾಟಕ್ಕೆ ಸಲ್ಲಿಸಿದ ಇನ್ನೊಂದು ಕಾಣಿಕೆಯೆಂದರೆ ಜಗತ್ತಿನ ಸಮಾಜವಾದಿ ದೇಶಗಳೊಂದಿಗೆ ಸಂಪರ್ಕ ಸ್ಥಾಪಿಸಿದ್ದು. ಅವರ ಬಂಧನದ ನಂತರ ಇದು ಮೂರ್ತರೂಪ ಪಡೆದು ಈಗ ವಿಮೋಚನಾ ಹೋರಾಟಕ್ಕೆ ಅಂತರಾಷ್ಟ್ರೀಯ ಬೆಂಬಲ ದೊರಕಿಸುವಲ್ಲಿ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ಅಭಿಪ್ರಾಯ ರೂಪಿಸುವಲ್ಲಿ ಇದರಿಂದ ಮಹದುಪಕಾರವಾಗಿದೆ.

ವಿಮೋಚನಾ ಹೋರಾಟ ಗುಪ್ತ ಸೈನಿಕ ಹೋರಾಟವಾಗಿ ಮಾರ್ಪಟ್ಟ ನಂತರ ಶತ್ರುವಿಗೆ ಸುಳಿವು ಸಿಗದಂತೆ ಚಳವಳಿಯನ್ನು ಸಂಘಟಿಸುವ ತಂತ್ರವನ್ನು ಹೋರಾಟಗಾರರಿಗೆ ಕಲಿಸಿಕೊಟ್ಟವರು ಮ್ಯಾಂಡೆಲಾ. ಎರಡು ವರ್ಷಗಳ ಕಾಲ ಪೋಲೀಸರ ಕೈಗೆ ಸಿಗದೆ ಯಶಸ್ವಿಯಾಗಿ ಚಳುವಳಿಯ ಸಂಘಟನೆ ನಡೆಸಿದರು. ಇಂತಹ ಸಂಘಟನೆಯ ಕೆಲಸದ ಮೇಲೆ ಡರ್ಬಾನ್‌ನಿಂದ ಹಿಂದಿರುಗುತ್ತಿದ್ದಾಗ ನೆಲ್ಸನ್ ಮ್ಯಾಂಡೆಲಾರವರನ್ನು ಮೂರು ಕಾರುಗಳಲ್ಲಿ ತುಂಬಿದ್ದ ಭದ್ರತಾ ಪೋಲೀಸರು ಅಡ್ಡಗಟ್ಟಿ ಬಂಧಿಸಿದರು.

ಬಹುಶಃ ಮ್ಯಾಂಡೆಲಾರನ್ನು ಬಂಧಿಸಿ ನಿಷ್ಕ್ರಿಯರನ್ನಾಗಿಸಿದರೆ ವಿಮೋಚನಾ ಹೋರಾಟ ನಿಂತು ಹೋಗಬಹುದೆಂದು ಬಿಳಿಯರ ಅಲ್ಪಸಂಖ್ಯಾತ ಸರಕಾರ ಭಾವಿಸಿದ್ದಿರಬೇಕು. ಆದರೆ ಎ.ಎನ್.ಸಿ.ಯ ಹೋರಾಟ ದಿನದಿನಕ್ಕೂ ಹೆಚ್ಚೆಚ್ಚು ಜನರನ್ನು, ಅದರಲ್ಲೂ ಕಾಲೇಜು, ಶಾಲೆ ಮಾತ್ರವಲ್ಲ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನು ಅವರೊಂದಿಗೇ ಅವರ ಪಾಲಕರನ್ನೂ ತನ್ನೆಡೆಗೆ ಆಕರ್ಷಿಸುತ್ತಾ ವ್ಯಾಪಕಗೊಳ್ಳುತ್ತಾ ಹೋಗುತ್ತಿದೆ. ಮ್ಯಾಂಡೆಲಾ ಸ್ಥಾಪಿಸಿದ ಮುಕ್ತಿಸೇನೆ ಪ್ರಿಟೋರಿಯಾ (ದ. ಆಫ್ರಿಕಾದ ರಾಜಧಾನಿ) ದಲ್ಲಿರುವ ಸರ್ಕಾರಕ್ಕೆ ಸಿಂಹಸ್ವಪ್ನವಾಗುತ್ತಿದೆ. ಮ್ಯಾಂಡೆಲಾರವರ ಹೆಸರು ಯುವಕರಿಗೆ ಸ್ಫೂರ್ತಿ ನೀಡುತ್ತಿದೆ. "ಕಾಮ್ರೇಡ್ ಮ್ಯಾಂಡೆಲಾರವರನ್ನು ಬಿಡುಗಡೆಗೊಳಿಸಿ" ಎಂಬ ಚಳುವಳಿ ವರ್ಣದ್ವೇಷದ ವಿರುದ್ಧ ಹೋರಾಟದ ಇನ್ನೊಂದು ಅಂಶವಾಗುತ್ತಿದೆ.

ನೆಹರೂ ಪುರಸ್ಕಾರ

18 ವರ್ಷಗಳಿಂದ ದಕ್ಷಿಣ ಆಫ್ರಿಕಾದ ಫ್ಯಾಸಿಸ್ಟ್ ಜೈಲಿನಲ್ಲಿ ದೇಶದ ವಿಮೋಚನೆಗಾಗಿ ಹಂಬಲಿಸುತ್ತಿರುವ ಮ್ಯಾಂಡೆಲಾರವರಿಗೆ 1979 ರ ಸಾಲಿನ ಅಂತರ್‌ರಾಷ್ಟ್ರೀಯ ತಿಳುವಳಿಕೆಗಾಗಿ ನೆಹರೂ ಪುರಸ್ಕಾರವನ್ನು ಭಾರತ ಸರಕಾರ ಕೊಟ್ಟಿದೆ. ಈ ಪ್ರಶಸ್ತಿಗೆ ಇವರಿಗಿಂತ ಯೋಗ್ಯವಾದ ವ್ಯಕ್ತಿಗೆ ಇದುವರೆಗೆ ಸಿಕ್ಕಿರಲಿಕ್ಕಿಲ್ಲ. ಯಾಕೆಂದರೆ ದಕ್ಷಿಣ ಆಫ್ರಿಕಾದಲ್ಲಿ ರಾಷ್ಟ್ರೀಯ ವಿಮೋಚನೆಗಾಗಿ ನಡೆಸುತ್ತಿರುವ ಹೋರಾಟ ಅದರಷ್ಟಕ್ಕೇ ಅಂತಿಮ ಗುರಿಯಲ್ಲ. ಅದು ಶೋಷಣೆಯಿಲ್ಲದ ಸಮಾಜದ ಸ್ಥಾಪನೆಯ ಕಡೆಗೊಯ್ಯುವ ಹಂತಗಳಲ್ಲಿ ಒಂದು ಎಂದು ಎ.ಎನ್.ಸಿ.ಯ "ಸ್ವಾತಂತ್ರ್ಯ ಮಹಾಪತ್ರ" ಹೇಳುತ್ತದೆ. ಮ್ಯಾಂಡೆಲಾರವರೇ ಸ್ವತಃ: "ನನ್ನ ಜೀವಮಾನದಲ್ಲಿ ನಾನು ಆಫ್ರಿಕಾದ ಜನರ ಹೋರಾಟದಲ್ಲಿ ನನ್ನನ್ನು ಮುಡಿಪಾಗಿಟ್ಟೆ. ನಾನು ಬಿಳಿಯರ ದಬ್ಬಾಳಿಕೆ ವಿರುದ್ಧ ಹೋರಾಡಿದೆ; ಕರಿಯರ ದಬ್ಬಾಳಿಕೆ ವಿರುದ್ಧ ಹೋರಾಡಿದೆ. ಎಲ್ಲಾ ಜನರು ಒಟ್ಟಿಗೇ ಸಾಮರಸ್ಯದಿಂದ ಸಮಾನ ಅವಕಾಶಗಳೊಂದಿಗೆ ಬಾಳುವ ಪ್ರಜಾಸತ್ತಾತ್ಮಕ ಹಾಗೂ ಸ್ವತಂತ್ರ ಸಮಾಜದ ಹಂಬಲ ಇಟ್ಟುಕೊಂಡಿದ್ದೇನೆ." ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಇತ್ತೀಚೆಗೆ ಪತ್ರಿಕೆಗಳು ಹಾಗೂ ಸಂಸತ್ತಿನಲ್ಲಿ ಭಾರತ ಸರಕಾರದ ಹೊರಿಸಲಾದ ಒಂದು ಆಪಾದನೆಯನ್ನು ಗಮನಿಸಬೇಕು. ಭಾರತೀಯ ಸೈನ್ಯದಲ್ಲಿ ಉಪಯೋಗಿಸಲಾಗುತ್ತಿದ್ದ ಸೆಂಚುರಿಯನ್ ಟ್ಯಾಂಕ್‌ಗಳು ಹಳೆಯವಾದವು (ಆದರೂ ಅವು ಉಪಯೋಗಿಸಲರ್ಹವಾಗಿದ್ದವು) ಎಂದು ಅವನ್ನು ಹರಾಜು ಹಾಕಲಾಗಿದ್ದು ಅವನ್ನು ಪಡೆಕೊಂಡ ಶಸ್ತ್ರಾಸ್ತ್ರ ವ್ಯಾಪಾರಿಯ ಮೂಲಕ ಅವು ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಅಲ್ಪಸಂಖ್ಯಾತ ಬಿಳಿಯರ ಕೈಸೇರಿ ಕರಿಯ ರಾಷ್ಟ್ರೀಯ ವಿಮೋಚನಾ ಹೋರಾಟಗಾರರ ವಿರುದ್ಧ ಉಪಯೋಗಿಸಲ್ಪಡುತ್ತಿವೆಯಂತೆ. ಈ ವ್ಯಾಪಾರಿ ಹಿಂದೆಯೂ ಇದೇ ರೀತಿ ಹರಾಜಿನಲ್ಲಿ ಶಸ್ತ್ರಾಸ್ತ್ರ ಖರೀದಿಸಿ ಜಿಂಬಾಬ್ವೆ ಇತ್ಯಾದಿ ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ವಿರೋಧಿಸುವವರಿಗೆ ಮಾರಿದ್ದನೆಂಬ ದಾಖಲೆಯಿದೆಯಂತೆ. ಈ ರೀತಿ ಹರಾಜಿನಲ್ಲಿ ಪಡೆದ ಶಸ್ತ್ರಾಸ್ತ್ರಗಳನ್ನು ನಮ್ಮ ದೇಶ ಅಧಿಕೃತವಾಗಿ ವಿರೋಧಿಸುವವರಿಗೆ ಮಾರಬಾರದೆಂಬ ಹರಾಜಿನ ಒಂದು ಶರ್ತವನ್ನು ಮುರಿದುದಕ್ಕಾಗಿ ಭಾರತದ ರಕ್ಷಣಾ ವಿಭಾಗದಲ್ಲಿ ಈತನ ಹೆಸರು ಕಪ್ಪುಪಟ್ಟಿ (ಅಂದರೆ ಹರಾಜಿನಲ್ಲಿ ಭಾಗವಹಿಸಲು ಅನರ್ಹರಾದವರ ಪಟ್ಟಿ) ಯಲ್ಲಿ ಸೇರಿತ್ತಂತೆ. ಇದನ್ನು ನಿರ್ಲಕ್ಷಿಸಿ ಆತನಿಗೆ ಈ ಸಲದ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಕೊಡಲಾಗಿತ್ತು. ಸಂಸತ್ತಿನಲ್ಲಿ ಈ ಬಗ್ಗೆ ಸದಸ್ಯರು ಎತ್ತಿದ ಪ್ರಶ್ನೆಗಳಿಗೆ ಸರಕಾರ ಸಮಾಧಾನಕರ ಉತ್ತರ ಕೊಟ್ಟಿಲ್ಲ. ಇದರಿಂದಾಗಿ ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ ಬಗ್ಗೆ ಭಾರತ ಸರಕಾರ ತಳೆದ ನಿಲುವಿನ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆ ಚಿಹ್ನೆ ಬಿದ್ದಿದೆ ಅದೇನೇ ಇರಲಿ. ವರ್ಣದ್ವೇಷ, ಜನಾಂಗದ್ವೇಷದ ವಿರುದ್ಧ ಐಕ್ಯಹೋರಾಟ ತೀವ್ರವಾಗಿ ಮುಂದುವರಿದು ಸಾಮ್ರಾಜ್ಯಶಾಹಿಗಳು, ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಶಸ್ತ್ರಾಸ್ತ್ರ ಕೈಗಾರಿಕಾ ಸಂಸ್ಥೆಗಳ ಬೆಂಬಲದಿಂದ ಆಳವಾಗಿ ಬೇರೂಬಿಟ್ಟ ಅಲ್ಪಸಂಖ್ಯಾತ ಬಿಳಿಯರ ದಬ್ಬಾಳಿಕೆ ಕೊನೆಗೊಳ್ಳುತ್ತದೆ ಎಂದು ಮ್ಯಾಂಡೆಲಾರವರ ನಂಬಿಕೆಯನ್ನು ಇತಿಹಾಸ ಪ್ರಜ್ಞೆಯಿರುವ ಎಲ್ಲರೂ ಒಪ್ಪುತ್ತಾರೆ.

—ಕೆ. ವೇದ್

ವಿದೇಶಿ ತೈಲ ಕಂಪನಿಗಳಿಗೆ ಆಮಂತ್ರಣ !

(4ನೇ ಪುಟದಿಂದ)

ಆಕ್ಷೇಪ ಕಂಡುಬಂದಿದೆ. ಒ. ಎನ್. ಜಿ. ಸಿ.ಯ ಅಧಿಕಾರಿ ಸಂಘ ಸರ್ಕಾರಕ್ಕೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತೈಲಶೋಧದ ಕ್ಷೇತ್ರದಲ್ಲಿ ಈ ತಪ್ಪು ನೀತಿ ಮತ್ತು ಒ ಎನ್.ಜಿ.ಸಿ ಯನ್ನು ನಡೆಸುತ್ತಿರುವ ರೀತಿಯ ಬಗ್ಗೆ ಪ್ರಸ್ತಾಪವಿದೆ. ಆದರೆ ಈ ಮನವಿ ಪತ್ರದ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಬಹುಶಃ ಯಾರಿಗೂ ಆಶ್ಚರ್ಯವಾಗಲಾರದು. ಅದರ ಬದಲು ಪೆಟ್ರೋಲಿಯಂ ಖಾತೆ ಒ ಎನ್.ಜಿ.ಸಿ. ಯನ್ನು ವಿಭಜಿಸಿ, ಪುನಃ ಸಂಘಟಿಸುವ ಬಗ್ಗೆ ವಿಚಾರ ಮಾಡುತ್ತಿದೆ. ಇದು ಒ.ಎನ್ ಜಿ ಸಿ ಯ ಶಕ್ತಿ, ಸಾಮರ್ಥ್ಯಗಳನ್ನು ಕಡಿಮೆ ಮಾಡಲು ಎಂದು ಬೇರೆ ಹೇಳಬೇಕಾಗಿಲ್ಲ.

ಭಾರತದ ಬಂಡವಾಳಶಾಹಿ ಮತ್ತು ಸ್ವಾವಲಂಬನೆ

ಜಗತ್ತಿನಾದ್ಯಂತ ತನ್ನ ಬಿಕ್ಕಟ್ಟಿನಿಂದ ಕೊನೆಗಾಲವನ್ನು ಸವಿಊ ಪಿಸು ತ್ತಾ ಬಂಡವಾಳಶಾಹಿ ನಿರ್ವೀರ್ಯವಾಗಿರುವ ಕಾಲದಲ್ಲಿ ಬೆಳೆಯುತ್ತಿರುವ ಭಾರತೀಯ ಬಂಡವಾಳಶಾಹಿ ವರ್ಗ ದೇಶವನ್ನು ಸ್ವಾವಲಂಬನೆಯ ಬೆಳವಣಿಗೆಯ ಮಾರ್ಗದ ಕೊಂಡೊಯ್ಯುವುದು ಸಾಧ್ಯವಿಲ್ಲ. ದೇಶದ ಸಂಪನ್ಮೂಲಗಳನ್ನು ಬೆಳವಣಿಗೆಗೆ ಉಪಯೋಗ ಮಾಡುವ ಬಗ್ಗೆ ಅದಕ್ಕೇನೂ ಆಸಕ್ತಿ ಇಲ್ಲ. ಅಂತರಾಷ್ಟ್ರೀಯ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ನಮ್ಮ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆದರೂ ಅದಕ್ಕೇನೂ ಕಳವಳವಿಲ್ಲ. ಅದರ ಲಾಭದಲ್ಲಿ ತಮಗೆ ಒಂದು ಪಾಲು ದೊರಕುವವರೆಗೆ, ಸ್ವಲ್ಪ ಮಟ್ಟಿಗೆ ಭಾರತದಲ್ಲಿ ವಿಜ್ಞಾನ, ತಾಂತ್ರಿಕತೆಯ ಬೆಳವಣಿಗೆಗೆ ಅದು ಪ್ರೋತ್ಸಾಹ ನೀಡಿರುವುದು ಈ ಲಾಭದ ಪಾಲಿನ ಬಗ್ಗೆ ಚೌಕಾಶಿ ನಡೆಸಲು ಬಲಯುತ ಸ್ಥಾನ ಪಡೆಯಲು ಮಾತ್ರ, ಭಾರತೀಯ ಬಂಡವಾಳಶಾಹಿ ವರ್ಗಕ್ಕೆ, ಅದರ ಸಂಕುಚಿತ ವರ್ಗಾಸಕ್ತಿಯ ದೃಷ್ಟಿಯಿಂದ, ವಿಜ್ಞಾನಿಗಳ, ತಾಂತ್ರಿಕ ತಜ್ಞರ ಉಪಯೋಗ ಇದಕ್ಕಿಂತ ಹೆಚ್ಚೇನೂ ತೋಚುವುದಿಲ್ಲ.

ಆದ್ದರಿಂದಲೇ ಈ ವರ್ಗದ ಸರಕಾರ ಮತ್ತು ಅದರ ಏಜಂಟರಾದ ಅಧಿಕಾರಶಾಹಿ ತನ್ನ ವರ್ಗಾಸಕ್ತಿಗಾಗಿ ಯಾವುದೇ ಕ್ಷೇತ್ರದಲ್ಲಿ ಪೂರ್ಣವಾಗಿ ವಿದೇಶೀ ಶಕ್ತಿಗಳ ಮೇಲೆ ಅವಲಂಬಿಸಲು ನಿರ್ಧರಿಸಿದಾಗ, ಆ ಕ್ಷೇತ್ರದಲ್ಲಿ ಪರಿಣತಿ ಪಡೆದ ನಮ್ಮ ದೇಶದ ತಾಂತ್ರಿಕರನ್ನು ತೀರಾ ಹೀನವಾಗಿ ನಡೆಸಿಕೊಳ್ಳುತ್ತದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. ತನ್ನ ವರ್ಗಾಸಕ್ತಿಗಳನ್ನು ದೇಶದ ಹಿತಾಸಕ್ತಿಗಳು ಎಂದು ಡಂಗುರ ಹೊಡೆಯಲು ಜಗತ್ತಿನ ತೈಲ ಬಿಕ್ಕಟ್ಟಿನಂತಹ ಪರಿಸ್ಥಿತಿಗಳು ನೆಪವಾಗಿ ಸಹಾಯಕ್ಕಾಗುತ್ತದೆ.

ಬಿ. ಎಚ್. ಇ. ಎಲ್. ಸೀಮನ್ಸ್ ಜತೆ 25 ವರ್ಷಗಳ ಪೂರ್ಣ ಅಧೀನತೆಯ ಒಪ್ಪಂದವನ್ನು ಜಾರಿಗೆ ತರಲು ಇದೇ ರೀತಿಯ ಹೀನ ನೀತಿಯನ್ನು ಅದು ಅನುಸರಿಸಿತ್ತು.

ಈ ನೀತಿಯನ್ನು ಕೈಗಾರಿಕೆ, ವಾಣಿಜ್ಯೋದ್ಯಮದ ಅಖಿಲ ಭಾರತ ಫೆಡರೇಶನ್‌ನ ಅಧ್ಯಕ್ಷರು" ವಾಸ್ತವಿಕ ಪ್ರಜ್ಞೆಯ ನೀತಿ" ಎಂದು ಸ್ವಾಗತಿಸಿ, ಈ ಜಂಟೀ ಕಾರ್ಯಾಚರಣೆಯು ಭಾರತದ ಉದ್ಯಮಿಗಳಿಗೂ ಪಾಲು ನೀಡಬೇಕೆಂದು ಕೇಳಿದ್ದಾರೆ ಭಾರತದ ಬಂಡವಾಳಶಾಹಿವರ್ಗ ಮತ್ತು ಅದರ ಸರ್ಕಾರಕ್ಕೆ ಸ್ವಾವಲಂಬನೆಯಲ್ಲಿ ಆಸಕ್ತಿ ಇದೆ ಎಂದು ಯಾರಿಗಾದರೂ ಇನ್ನೂ ಭ್ರಮೆ ಇದ್ದರೆ ಈಗ ಅವರು ಕಣ್ಣು ತೆರೆಯಬೇಕಾಗಿದೆ.

— ವಿರಾಜ್

ರೈತರ ಪ್ರಚಾರ ಜಾಥಾ

ಬೆಳ್ತಂಗಡಿ ತಾಲ್ಲೂಕು ರೈತ ಸಂಘದ ವತಿಯಿಂದ 4-11-1980 ರಂದು ರೈತರ ಪ್ರಚಾರ ಜಾಥಾ ಆರಂಭವಾಯಿತು. ಉಜಿರೆಯಿಂದ ಶುರುವಾದ ಜಾಥಾ ಮಲೆನಾಡಿನ ಗ್ರಾಮಗಳಾದ ತೋಟತ್ತಾಡಿ, ಚಿಬಿದ್ರೆ, ಚಾರ್ಮಾಡಿ, ನೆರಿಯ, ಪುದುವೆಟ್ಟು, ಕಳೆಂಜ, ಹತ್ಯಡ್ಕ, ಸಿಡ್ಲೆ, ಧರ್ಮಸ್ಥಳ, ಕಲ್ಮಂಜ ಮುಂತಾದುವುಗಳನ್ನು ಕಾಲ್ನಡಿಗೆಯಿಂದ ಸಂಚಾರ ಮಾಡಿತು. ಮನೆ ಮನೆಗೆ ಸಂದರ್ಶನ ನೀಡಿದ ಜಾಥಾ ಹತ್ತು ದಿನಗಳವರೆಗೆ ನಡೆದು ರಾಜ್ಯದಲ್ಲಿ ನಡೆಯುತ್ತಿರುವ ರೈತ ಕಾರ್ಮಿಕ ಚಳುವಳಿಗಳು, ರಾಜಕೀಯ, ಏರುತ್ತಿರುವ ಬೆಲೆಗಳು ಮೊದಲಾದವುಗಳು, ಸಂಘಟನೆ ಹೋರಾಟ ಇವುಗಳನ್ನು ಕುರಿತು ಪರಿಚಯ ಮಾಡಿಕೊಟ್ಟಿತು. ರೈತರ ಗುಂಪುಗಳಲ್ಲಿ ಚರ್ಚೆ ನಡೆಸಿತು.

ಹಳ್ಳಿಗಳ ಜನರ ದಾರಿದ್ರ್ಯ, ದುಃಖ ದುಮ್ಮಾನಗಳ ಪರಿಚಯ ಜಾಥಾದ ಜನರಿಗೆ ತೀವ್ರವಾಗಿ ತಟ್ಟಿತು. ಕೈ ಮುರಿದುಕೊಂಡ ಮಗಳಿಗೆ ತಂದೆಯದೇ ಒರಟು ಚಿಕಿತ್ಸೆ, ನೂರಡಿ ಮರದ ಮೇಲಿಂದ ಬಿದ್ದವನಿಗೆ ಕೈಕಾಲುಗಳ ನಷ್ಟ, ಶೇಂದಿ ಕಂಟ್ರಾಕ್ಟರನ ಭಜನೆ, ಕಪ್ಪು ಬಟ್ಟೆಯ ಅಯ್ಯಪ್ಪನ ಭಕ್ತರ ಹರಕೆ (ಇಂದಿರಾಗಾಂಧಿ ಪ್ರಧಾನಿಯಾದರೆ ಶಬರಿಮಲೆಗೆ ಹೋಗುತ್ತೇವೆಂಬ ಹರಕೆ) ಇವೆಲ್ಲ ಹಳ್ಳಿಯ ಹಲವು ಮುಖಗಳನ್ನು ಪರಿಚಯ ಮಾಡಿಕೊಟ್ಟಿತು.

○

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಎಲ್ ಸಲ್ವಾಡೋರ್…….

(3ನೇ ಪುಟದಿಂದ)

ಕೂರಿಸಿದ ಈ ಹೊಸ ಆಡಳಿತಗಾರರಿಗಿರಲಿಲ್ಲ. ಆದರೆ ತಪ್ಪಿತಸ್ಥರು ಯಾರು ಎಂದು ತಿಳಿದಿದ್ದ ಜನರು "ಅಧಿಕಾರ" ದಲ್ಲಿರುವ ಹೊಸ ಆಳುವ ಕೂಟದ ಹಾಸ್ಯಾಸ್ಪದ ಸ್ಥಾನವನ್ನು ಕೂಡಲೇ ಅರ್ಥಮಾಡಿಕೊಂಡರು.

ಈ ಆಳುವ ಕೂಟ ಕೈಗೊಂಡ ಇನ್ನೊಂದು ಹಾಸ್ಯಾಸ್ಪದ ಕ್ರಮವೆಂದರೆ ಒಂದು ಕೃಷಿ ಸುಧಾರಣೆಯ ಕಾನೂನನ್ನು ಮಾಡಿರುವುದು. ಇದನ್ನು ಭೂಮಾಲಕರು ಸೈನ್ಯದ ಉಚ್ಚ ಅಧಿಕಾರಿಗಳ ಬೆಂಬಲದಿಂದ ಬಲವಾಗಿ ವಿರೋಧಿಸಿದ್ದರು. ಈ ಕಾನೂನನ್ನು ಮಾಡಿದ ದಿನವೇ ಅಂದರೆ ಮಾರ್ಚ್ 6ರಂದೇ ದೇಶಾದ್ಯಂತ ದಿಗ್ಬಂಧನ ಪರಿಸ್ಥಿತಿಯನ್ನು ಜಾರಿಗೊಳಿಸಬೇಕಾಗಿ ಬಂತು. ಇದರೊಂದಿಗೇ ರೈತರ ವಿರುದ್ಧ ದಮನಕಾರಿ ಕ್ರಮಗಳು ಆರಂಭವಾದವು ನೂರಾರು ಜನ ಕೊಲೆಯಾದರು. ಅವರ ಬೆಳೆ ನಾಶವಾಯಿತು. ಅವರ ಮನೆ ಬೆಂಕಿಗಾಹುತಿಯಾಯಿತು. ಅವರ ಹೆಂಗಸರು ಅತ್ಯಾಚಾರಕ್ಕೊಳಗಾದರು. ಮಕ್ಕಳ ಹತ್ಯೆ ನಡೆಯಿತು, ಇಂತಹ ದಮನದ ಪರಿಣಾಮವಾಗಿ ಹಳ್ಳಿಗಳನ್ನೆಲ್ಲಾ ರಣರಂಗವಾಗಿಸಿದ ಅಮಾನವೀಯ ಕಾರ್ಯಕ್ರಮ ಆರಂಭವಾಗಿದೆ. ಇದು ಯಾಂಕಿಗಳು (ಅಮೆರಿಕನ್ನರು) ವಿಯೆಟ್ನಾಮಿನ ಗ್ರಾಮಾಂತರ ಜನರಿಗೆ ಮಾಡಿದ ಅನ್ಯಾಯ ಅತ್ಯಾಚಾರದ ಸಾಲ್ವಡೋರ್ ಅವತರಣಿಕೆಯಾಗಿದೆ.

ಸಾಲ್ವಡೋರ್ ಕ್ರಿಸ್ತ ಧರ್ಮಾಧಿಕಾರಿಗಳ ಕಾನೂನು ಪರಿಹಾರ ನಿಧಿಯ ಪ್ರಕಾರ ಹಲವಾರು ಸಾಮೂಹಿಕ ಅಪರಾಧಗಳನ್ನು ಇಲ್ಲಿ ಎಸಗಲಾಗಿದೆ. ಸುಂಪುಲ್ ನದೀ ಕ್ಷೇತ್ರದಲ್ಲಿ ಆರುನೂರು ಸಾಲ್ವಡೋರ್ ವಾಸಿಗಳನ್ನು ಮೆಷಿನ್‌ಗನ್‌ಗೆ ಆಹುತಿ ಮಾಡಲಾಯಿತು. ಸೈನ್ಯ, ನ್ಯಾಷನಲ್ ಗಾರ್ಡ್ ಹಾಗೂ ORDEN ಎಂಬ ಫ್ಯಾಸಿಸ್ಟ್ ಗುಂಪಿನ ಸದಸ್ಯರು ಮನೆಗಳಿಗೆ ನುಗ್ಗಿ ಮನೆಗಳಲ್ಲಿರುವವರನ್ನೆಲ್ಲಾ ಕೊಂದಿದ್ದಾರೆ. ಇದರಲ್ಲಿ 15 ಮಕ್ಕಳೂ ವಧಿಸಲ್ಪಟ್ಟರು. ಅವರಲ್ಲಿ ಕೇವಲ ಕೆಲವೇ ವಾರಗಳ ಹಿಂದೆ ಹುಟ್ಟಿದ ಒಂದು ಮಗುವೂ ಇತ್ತು. ಕೊಲೆಗೈಯ್ಯಲ್ಪಟ್ಟ ತಾಯಿಯ ಮಡಿಲಲ್ಲೇ ಆ ಮಗು ಸತ್ತಿತು; ನಾಲ್ಕು ಮಕ್ಕಳು ಮೂರು ವರ್ಷಕ್ಕಿಂತಲೂ ಸಣ್ಣವರು; ಉಳಿದವರ ವಯಸ್ಸು ಮೂರು ಮತ್ತು ಹತ್ತು ವರ್ಷಗಳ ನಡುವಿನವರು.

ಪ್ರತಿದಿನ ಕಾರ್ಮಿಕರು, ಅಧ್ಯಾಪಕರು, ವಿದ್ಯಾರ್ಥಿಗಳು, ಧರ್ಮಪುರೋಹಿತರು ಕೊಲೆಯಾಗುತ್ತಿದ್ದಾರೆ. ಧರ್ಮಾಧಿಕಾರಿಗಳ ಕಾನೂನು ಪರಿಹಾರ ನಿಧಿ ಅಕ್ಟೋಬರ್ 7 ರಂದು "ಕಳೆದ ಒಂದು ವಾರದಲ್ಲಿ 186 ಜನರ ಕೊಲೆಯಾಗಿದೆ" ಎಂದು ಆಪಾದಿಸಿತು. ಮರುದಿನವೇ ಆ ಸಂಸ್ಥೆಯ ಕಟ್ಟಡದ ಪ್ರವೇಶದ್ವಾರದಲ್ಲಿ ಸೈನಿಕ ಕ್ರಿಶ್ಚಿಯನ್ ಡೆಮಾಕ್ರಟಿಕ್ ಆಳುವ ಕೂಟ ಒಂದು ಶಕ್ತಿಶಾಲೀ ಬಾಂಬನ್ನು ನೆಟ್ಟಿತು. ಅದು ಸ್ಫೋಟಗೊಂಡು ಪ್ರವೇಶದ್ವಾರ ನಾಶವಾಯಿತು, ಆಳುವ ಕೂಟದ ಫ್ಯಾಸಿಸ್ಟ್ ನರಮೇಧದ ಭೀಕರ ದಮನದಿಂದ ತಪ್ಪಿಸಿಕೊಂಡು ಓಡಿ ಬಂದ ರೈತರು ಈ ಕಟ್ಟಡದಲ್ಲಿ ಆಶ್ರಯ ಪಡೆದಿದ್ದರು.

ಇವೆಲ್ಲದರೊಂದಿಗೆ ನಗರ ಪ್ರದೇಶಗಳಲ್ಲೂ ಕಾರ್ಖಾನೆಗಳನ್ನು ಮುಚ್ಚಲಾಗಿದೆ, ಗ್ರಾಮಾಂತರ ವಲಯಗಳಲ್ಲಿ ನಪಾಂ ಇತ್ಯಾದಿ ವಿಷಕಾರೀ ವಸ್ತುಗಳನ್ನು ವಿಮಾನಗಳಿಂದ ಉದುರಿಸಿದ್ದಾರೆ, ಈ ಸಣ್ಣ ದೇಶದ ಜನರು ಇದರಿಂದಾಗಿ ಭೀಕರ ಬಡತನ ಹಾಗೂ ಹಸಿವಿನಿಂದ ನರಳುತ್ತಿದ್ದಾರೆ

ಅಮೆರಿಕೆಯ ಸಂಯುಕ್ತ ಸಂಸ್ಥಾನ ವೆನೆಜುವೆಲ್ ಹಾಗೂ ಇಸ್ರೇಲ್ ಈ ನರಹತ್ಯಾಕಾರೀ ಕೂಟಕ್ಕೆ ಸೈನಿಕ ಹಾಗೂ ಆರ್ಥಿಕ "ಸಹಾಯ" ನೀಡುತ್ತಿದ್ದಾರೆ. ಈ "ಸಹಾಯ"ದಿಂದಾಗಿ ಒಂದು ವರ್ಷದಲ್ಲಿ ಎಲ್‌ಸಲ್ವಡೋರ್ ದೇಶಕ್ಕೆ ದೇಶವೇ ಒಂದು ದೊಡ್ಡ ರಣರಂಗದಂತಾಗಿಬಿಟ್ಟಿದೆ.

○

ರೈತಸಂಘ ಮತ್ತು ತೋಟ ಕೆಲಸಗಾರರ ಸಂಘದ ಬಹಿರಂಗ ಸಭೆ

ತಾ. 30-11-1980ರಂದು ಪುತ್ತೂರು ತಾಲ್ಲೂಕು ರೈತಸಂಘ ಹಾಗೂ ತೋಟಕೆಲಸಗಾರರ ಸಂಘ ಸುಳ್ಯ ಇವೆರಡರ ನೇತೃತ್ವದಲ್ಲಿ ಪೆರ್ಲಂಪಾಡಿಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಯಿತು. ಗ್ರಾಮದ ಬೇರೆ ಬೇರೆ ಕಡೆಯಿಂದ ಸಾವಿರಾರು ಜನ ಮೆರವಣಿಗೆಯಲ್ಲಿ ಬಂದು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಬಹಿರಂಗ ಸಭೆಯ ಅಧ್ಯಕ್ಷಸ್ಥಾನವನ್ನು ಕೊಳ್ತಿಗೆ ಗ್ರಾಮ ರೈತಸಂಘದ ಅಧ್ಯಕ್ಷ ಕಾಂ. ರುಕ್ಮಯ್ಯಗೌಡರು ವಹಿಸಿದ್ದರು. ಪ್ರಾರಂಭದಲ್ಲಿ ಪುತ್ತೂರು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣ ಗೌಡರು ಸ್ವಾಗತ ಭಾಷಣ ಮಾಡುತ್ತಾ, ಯಾವುದೇ ಬಂಡವಾಳಶಾಹಿ ಪಕ್ಷಗಳ ಪ್ರತಿನಿಧಿಗಳು ಕೇವಲ ಚುನಾವಣೆಯ ಕಾಲದಲ್ಲಿ ಓಟು ಗಿಟ್ಟಿಸಲು ಮಾತ್ರ ಬರುತ್ತಾರೆಯೇ ಹೊರತು ರೈತರ ಮಜೂರರ ಸಂಕಷ್ಟಗಳಲ್ಲಿ ಪಾಲ್ಗೊಳ್ಳುವುದಿಲ್ಲ ಬದಲಾಗಿ ತಮ್ಮ ಹಿತಸಾಧನೆಯ ಬಗ್ಗೆಯೇ ಚಿಂತಿಸುತ್ತಾರೆ ಎಂದು ಹೇಳಿದರು.

ತೋಟ ಕೆಲಸಗಾರರ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣ ಭಟ್ ತಮ್ಮ ಭಾಷಣದಲ್ಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ವಿವರಿಸಿದರು. ಸರಕಾರ ಬೇರೆಯವರಿಗೆ ಮಾದರಿಯಾಗಿರಬೇಕಾದಂತ ಸನ್ನಿವೇಶದಲ್ಲಿ ಸರಕಾರಿ ರಬ್ಬರ್ ತೋಟದಲ್ಲಿಯೇ ಕಾರ್ಮಿಕರಿಗೆ ಬೋನಸ್ ಅಲ್ಲದೆ ಇತರ ಸೌಕರ್ಯಗಳನ್ನು ಕೊಡದೇ ಇರುವುದರ ಬಗ್ಗೆ ಈ ಸರಕಾರದ ನಾಚಿಕೆಗೇಡಿನ ವಿಚಾರದ ಬಗ್ಗೆ ವಿವರಿಸಿದರು. ಸರಕಾರಿ ರಬ್ಬರ್ ತೋಟವನ್ನು ಸುರು ಮಾಡುವ ಸಮಯದಲ್ಲಿಯೇ ಕೆಲಸ ಮಾಡಿಕೊಂಡಿದ್ದ ಈ ಊರಿನ ಜನರಿಗೆ ಯಾವುದೇ ಕಾರಣವಿಲ್ಲದೆ ಒಮ್ಮೆಂದೊಮ್ಮೆ ಕೆಲಸ ನಿಲ್ಲಿಸಿದ ಡಿ. ಎಫ್. ಓ. ರವರ ವರ್ತನೆಯ ಬಗ್ಗೆ ಟೀಕಿಸಿದರು, ಮಾತ್ರವಲ್ಲ ಈ ಬಗ್ಗೆ ಹೋರಾಟ ನಡೆಸುವುದು ಒಂದೇ ದಾರಿ ಕಾರ್ಮಿಕ ವರ್ಗಕ್ಕೆ ಇರುವುದು ಎಂದು ಒತ್ತಿ ಹೇಳಿದರು. ಈ ಹೋರಾಟಕ್ಕೆ ತಮಿಳು ಹಾಗೂ ತುಳುಭಾಷೆಯ ಕಾರ್ಮಿಕರೆಂದು ಭೇದಭಾವವಿಲ್ಲದೆ ಎಲ್ಲಾ ರೈತಮಜೂರರು ಬೆಂಬಲ ನೀಡಬೇಕೆಂದು ಕರೆಯಿತ್ತರು.

ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ ಯು. ಜನಾರ್ಧನ ನಾಯ್ಕ್‌ರವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸ್ವಾತಂತ್ರ್ಯ ಸಿಕ್ಕಿದ ನಂತರದ ಈ ಕಾಲಾವಧಿಯಲ್ಲಿ ಬಂಡವಾಳಶಾಹಿ, ಜಮೀನ್ದಾರರು ಹಾಗೂ ಅವರನ್ನು ಪ್ರತಿನಿಧಿಸುತ್ತಿರುವ ಈ ಕಾಂಗ್ರೆಸ್ ಸರಕಾರ, ಸಾಮಾನ್ಯ ಬಡಜನತೆಯನ್ನು ಮರ್ದನಗೊಳಿಸುತ್ತಿರುವ ಬಗ್ಗೆ ವಿವರಿಸಿದರು. ಬಡ ದರಖಾಸ್ತುದಾರರ ಮೇಲೆ ಸರಕಾರ ನಡೆಸುತ್ತಿರುವ ದಬ್ಬಾಳಿಕೆ ಹಾಗೂ ಅವರು ಅಗತೆ ಮಾಡಿದ ಸ್ಥಳದ ಮೇಲೆ ದಂಡನೆ ಹೇರಿ ಅವರನ್ನು ನಿರ್ಗತಿಕರನ್ನಾಗಿ ಮಾಡುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ಜನತೆಯ ಹೋರಾಟದ ಪ್ರತಿಫಲವಾಗಿ ಬಂದ ಭೂಮಸೂದೆ ಕಾನೂನನ್ನು (ಐ) ಕಾಂಗ್ರೆಸ್‌ನ ದಳ್ಳಾಳಿಗಳಾದ ಟ್ರಿಬ್ಯೂನಲ್‌ಗಳು, ರೈತನ ಭೂಮಿಯನ್ನು ಕಸಿದು ಭೂಮಾಲೀಕರಿಗೆ ಕೊಡುವ ಕ್ರಮವನ್ನು ಖಂಡಿಸಿದರಲ್ಲದೆ, ಜನತೆ ಎಚ್ಚೆತ್ತು ಇದರ ಬಗ್ಗೆ ಪ್ರತಿಭಟಿಸಬೇಕೆಂದು ಕರೆಯಿತ್ತರು.

○

ರೈತರನ್ನು ಸುಲಿಗೆಯಿಂದ ರಕ್ಷಿಸಿರಿ

—ಪಿ. ರಾಮಚಂದ್ರರಾವ್

ಕಳೆದ 33 ವರ್ಷಗಳಿಂದಲೂ ರೈತರು ಒಂದೇ ಸಮನೆ ಸುಲಿಗೆಗೆ ತುತ್ತಾಗುತ್ತಿದ್ದು ಅವರ ಬೆನ್ನು ಮೂಳೆ ಮುರಿದಿದೆ. ಅವರ ರಕ್ಷಣೆಗೆ ಹೋರಾಡುವುದು ರೈತಸಂಘದ ಆದ್ಯ ಕರ್ತವ್ಯ. ಮಳೆಯ ಅಭಾವ, ನೀರಾವರಿಯ ಅನುಕೂಲ ಇಲ್ಲದಿರುವುದು, ಬೆಳೆಗೆ ಯೋಗ್ಯ ಬೆಲೆ ಸಿಗದಿರುವುದು, ಗೊಬ್ಬರ, ಕಬ್ಬಿಣ, ರೈತರು ಕೊಂಡುಕೊಳ್ಳುವ ಇತರ ವಸ್ತುಗಳ ಬೆಲೆಯಲ್ಲಿ ಹೆಚ್ಚಳಗಳಿಂದಾಗಿ ರೈತ ತಾನು ಪಡೆದ ಸಾಲವನ್ನು ಮುಟ್ಟಿಸುವ ಪರಿಸ್ಥಿತಿಯಲ್ಲಿಲ್ಲದೆ, ಬಡ್ಡಿ ಹೆಚ್ಚಾಗುತ್ತಾ ತನ್ನ ಹೊಲ-ಮನೆಗಳನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಈ ಕಾರಣದಿಂದಲೇ ರೈತರ ಸಾಲವನ್ನೆಲ್ಲ ರದ್ದು ಮಾಡಿ, ತನ್ನ ಜೀವ ಉಳಿಸಿಕೊಳ್ಳಲು ಅವನಿಗೆ ಹೊಸ ಸಾಲಕೊಡಬೇಕೆಂದು ನಾವು ಕೇಳುತ್ತಿರುವುದೆಂದು ಪ್ರಾಂತ ರೈತಸಂಘದ ಕಾರ್ಯದರ್ಶಿಯವರಾದ ಕಾಂ. ರಾಮಚಂದ್ರರಾವ್ ಅವರು ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂದಗಿ ತಾಲ್ಲೂಕಿನಲ್ಲಿ ರೈತರ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

ಬಿಜಾಪುರ ಜಿಲ್ಲೆಯನ್ನು ಬರಗಾಲವೆಂದು ಸಾರಬೇಕೆಂದು ಒತ್ತಾಯಪಡಿಸಲು ರೈತಸಂಘದ ಪರವಾಗಿ ನವೆಂಬರ್ 22-24ರಂದು ಮತಪ್ರದರ್ಶನ ಏರ್ಪಡಿಸಲಾಗಿತ್ತು. ಸಾವಿರಾರು ರೈತರು ಮತಪ್ರದರ್ಶನ ನಡೆಸಿ ತಹಶೀಲದಾರರಿಗೆ, ಕೆ.ಇ.ಬಿ. ಇಂಜಿನಿಯರಿಗೆ ಹಾಗೂ ನೀರಾವರಿ ಅಧಿಕಾರಿಗಳಿಗೆ ತಮ್ಮ ಸಮಸ್ಯೆಗಳ ಕುರಿತು ಮನವಿಯನ್ನರ್ಪಿಸಿ ಘೆರಾವೋ ಮಾಡಿದರು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಾಂತ ರೈತಸಂಘದ ಕಾರ್ಯದರ್ಶಿ ರಾಮಚಂದ್ರರಾವ್, ಜಿಲ್ಲಾ ರೈತಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಎನ್. ಕೆ. ಉಪಾಧ್ಯಾಯ, ಡಿ. ಎಂ. ಖಲಾಸಿಯವರು ಭಾಷಣ ಮಾಡಿದರು. ಸಿಂದಗಿಯ ಸಭೆಯ ಅಧ್ಯಕ್ಷತೆಯನ್ನು ಹಿರಿಯ ಕಾರ್ಮಿಕ ಮುಖಂಡ ಕಾಂ. ಸೋಮಣ್ಣನವರೂ, ಇಂಡಿಯ ಸಭೆಯ ಅಧ್ಯಕ್ಷತೆಯನ್ನು ದುಂಡಪ್ಪಗೌಡ ಪಾಟೀಲರೂ ವಹಿಸಿದ್ದರು. ●

ಪೋಲೀಸ್ ದೌರ್ಜನ್ಯದ ಖಂಡನೆ

ದಿನಾಂಕ 26-11-80 ರಂದು ಹುಬ್ಬಳ್ಳಿಯಲ್ಲಿ ಬೆಲೆ ಏರಿಕೆಯ ವಿರುದ್ಧ ಶಾಂತರೀತಿಯಿಂದ ಮತಪ್ರದರ್ಶನ ಮಾಡುತ್ತಿದ್ದ ಮಹಿಳೆಯರ ಮೇಲೆ ಪೋಲೀಸರು ಲಾಠಿಚಾರ್ಜ್, ಅಶ್ರುವಾಯು ಪ್ರಯೋಗಿಸಿದ್ದನ್ನು ರಾಯಚೂರಿನ ಪ್ರಗತಿಪರ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸಿದೆ.

ವಿನಾಕಾರಣ ಲಾಠೀಚಾರ್ಜ್ ಮಾಡಿ ಮಹಿಳೆಯರನ್ನು ಮಕ್ಕಳನ್ನು ಥಳಿಸಿದ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ, ಜನತೆಯ ಬೇಡಿಕೆಗಳನ್ನು ಈಡೇರಿಸದ ಸರ್ಕಾರ ಹಿಂಸೆಯಿಂದ ಜನಚಳುವಳಿಗಳನ್ನು ಹತ್ತಿಕ್ಕಲಾಗದು ಎಂದು ಸರಕಾರವನ್ನು ಎಚ್ಚರಿಸಿದೆ. ○

"ಅಸ್ಸಾಂ ಚಳವಳಿಯ ನಿಜಸ್ವರೂಪ"

ಒಂದು ವಿಚಾರ ಸಂಕಿರಣ

ತಾರೀಕು 30-11-80 ರಂದು ಪುತ್ತೂರಿನ ಅಸ್ಸಾಂ ಚಳುವಳಿಯ ನಿಜಸ್ವರೂಪದ ಬಗ್ಗೆ ವಿಚಾರ ಸಂಕಿರಣ ನಡೆಯಿತು, ಪುತ್ತೂರಿನ ಟೌನ್ ಹಾಲ್‌ನಲ್ಲಿ ನಡೆದ ಈ ವಿಚಾರ ಸಂಕಿರಣವನ್ನು ಪುತ್ತೂರು ತಾಲ್ಲೂಕು ಡಿ.ವೈ.ಓ.ನವರು ಸಂಘಟಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷರಾಗಿ ಶ್ರೀ ಸಿ. ಆರ್. ಭಟ್ ಮತ್ತು ಪ್ರಬಂಧಕಾರರಾಗಿ ಶ್ರೀರಾಮಚಂದ್ರ ಉಡುಪ ಎಂ.ಎ. ಮತ್ತು ಶ್ರೀ ಎಸ್. ಸುಬ್ರಹ್ಮಣ್ಯಭಟ್ ಎಂ.ಕಾಂ. (ಸಂಚಾಲಕ ಸಮುದಾಯ ಪುತ್ತೂರು) ಇವರು ನಿಯೋಜಿತರಾಗಿದ್ದರು. ಅನಿವಾರ್ಯ ಕಾರಣಗಳಿಂದಾಗಿ ರಾಮಚಂದ್ರ ಉಡುಪರು ಬಂದಿರಲಿಲ್ಲ.

ಕಾರ್ಯಕ್ರಮದ ಮೊದಲ ಅಂಗವಾಗಿ ಡಿ.ವೈ.ಓ.ನ ತಾಲ್ಲೂಕು ಸಂಚಾಲಕ ಕಾಂ. ವಿಲ್ಫ್ರೆಡ್ ಮಾರ್ಟಿನ್ ಡಿಸೋಜರು ಸ್ವಾಗತಿಸಿದರು. ಉದ್ಘಾಟನಾ ಭಾಷಣ ಮಾಡಿದ ಕಾಂ. ರಾಮಕೃಷ್ಣ ಅವರು ಭಾಷಣಕಾರರನ್ನು ಸಭಿಕರಿಗೆ ಪರಿಚಯಿಸಿದರು. ನಂತರ ಶ್ರೀ ಎಸ್.ಎಸ್. ಭಟ್‌ರವರು ಪ್ರಬಂಧವನ್ನು ಮಂಡಿಸಿದರು. ನಂತರ ಈ ಪ್ರಬಂಧದ ಮೇಲೆ ಚರ್ಚೆ ಮಾಡಲಾಯಿತು. ಪ್ರಶ್ನೆಗಳಿಗೆ ಎಸ್.ಎಸ್. ಭಟ್ ಮತ್ತು ಶ್ರೀ ಸಿ. ಆರ್. ಭಟ್ ಉತ್ತರಿಸಿದರು.

ಅಧ್ಯಕ್ಷಸ್ಥಾನದಿಂದ ಮಾತನಾಡಿದ ಶ್ರೀ ಸಿ. ಆರ್. ಭಟ್‌ರವರು ಚಳುವಳಿ ನಡೆದು ಬಂದ ದಾರಿಯನ್ನು ವಿವರಿಸಿದರು. ಚಳುವಳಿಯ ಬಗ್ಗೆ ಸರಕಾರದ ಧೋರಣೆಯನ್ನು ಟೀಕಿಸುತ್ತಾ ಈ ಸಮಸ್ಯೆ ಪರಿಹಾರವಾಗುವುದು ಸರಕಾರಕ್ಕೂ ಬೇಕಿಲ್ಲ. ಬಂಡವಾಳಶಾಹಿಗಳಿಗೂ ಬೇಕಿಲ್ಲ. ಆದರೆ ಇದು ಪ್ರತಿಯೊಬ್ಬ ನಾಗರಿಕನ ಸಮಸ್ಯೆ, ಅಸ್ಸಾಂನಲ್ಲಿ ಈ ಸಮಸ್ಯೆ ಪರಿಹಾರವಾಗದಿದ್ದರೆ ವಿಚ್ಛಿದ್ರ ಶಕ್ತಿಗಳ ಮೂಲಕ ಇದು ದೇಶದಾದ್ಯಂತ ಹರಡಬಹುದು ಎಂದು ಎಚ್ಚರಿಸಿದರು. ಈ ಚಳುವಳಿ ಅಲ್ಲಿನ ಪ್ರಜಾಪ್ರಭುತ್ವವಾದಿಗಳಿಗೆ, ವಿದ್ಯಾರ್ಥಿಗಳಿಗೆ, ಅಲ್ಪಸಂಖ್ಯಾತರಿಗೆ ಮಾರಕವಾಗಿದೆ ಎಂದ ಅವರು ಅಸ್ಸಾಂಗೆ ಸಮಸ್ಯೆ ಇರುವುದು ನಿಜ ಎಂದರು. ಆದರೆ ಈ ಸಮಸ್ಯೆಯನ್ನು ಕೇವಲ ಒಂದು ಪ್ರಾಂತೀಯ ಜಾತಿಗೆ ಸಂಬಂಧಿಸಿದ ಸೀಮಿತ ಚೌಕಟ್ಟಿನೊಳಗೆ ನೋಡದೇ ಮಾನವೀಯತೆಯ ವಿಶಾಲ ದೃಷ್ಟಿಕೋನದಿಂದ ಬಗೆಹರಿಸಬೇಕು ಎಂದು ಹೇಳಿದರು. ಅಸ್ಸಾಂನ ಚಳುವಳಿಕಾರರಿಗೆ ಅಲ್ಲಿನ ಬಂಡವಾಳಶಾಹಿಗಳು ವಿದೇಶದಿಂದ ಬಂದ ಬಂಡವಾಳಶಾಹಿಗಳು, ದೊಡ್ಡ ದೊಡ್ಡ ಭೂಮಾಲೀಕರು ಶತ್ರುಗಳೇ ಹೊರತು ಅಲ್ಲಿರುವ ಬಂಗಾಲಿಗಳು, ಅಲ್ಪಸಂಖ್ಯಾತ ಮುಸಲ್ಮಾನರು, ಬಿಹಾರದವರು, ಅಥವಾ ಬಾಂಗ್ಲಾದೇಶ

(ಕಡೇ ಪುಟ ನೋಡಿ)

ಅಧ್ಯಕ್ಷೀಯ ಪದ್ಧತಿ : ಇಂದಿರಾಗೆ ಇ. ಎಂ. ಎಸ್. ಎಚ್ಚರಿಕೆ

(1ನೇ ಪುಟದಿಂದ)

ಬರಿ ಆಡಳಿತಗಳು ಬಂದರೂ ಅಲ್ಲಿನ ಪರಿಸ್ಥಿತಿ ಸುಧಾರಿಸಿಲ್ಲ ಎಂಬುದನ್ನು ಗಮನಿಸಬೇಕು ಎಂದು ಕಾಂ. ನಂಬೂದಿರಿಪಾದ್ ಸೂಚಿಸಿದರು. ದೇಶದಲ್ಲಿರುವ ಈಗಿನ ಎಲ್ಲಾ ಸಮಸ್ಯೆಗಳಿಗೆ ಅಧ್ಯಕ್ಷೀಯ ಮಾದರಿ ಪದ್ಧತಿಯನ್ನು ತರುವುದು ಪರಿಹಾರವೆ? ಎಂದು ಪ್ರಶ್ನಿಸಿದ ಇ.ಎಂ.ಎಸ್., ಅವರು, ಮೂಲಭೂತ ನೀತಿಗಳು ಸರಿಯಾಗಿಲ್ಲದ ಹೊರತು ಯಾವ ಆಡಳಿತ ವ್ಯವಸ್ಥೆಯೂ ದೀರ್ಘಕಾಲ ನಿಲ್ಲಲಾರದು ಎಂದು ಅಭಿಪ್ರಾಯಪಟ್ಟರು.

ಹೊಸ ರಾಜಕೀಯ ಶಕ್ತಿ

ಕೇರಳದಲ್ಲಿನ ಸಿ ಪಿ ಐ.(ಎಂ) ಹಾಗೂ ಕಾಂಗ್ರೆಸ್ಸು ನಡುವಿನ ಘರ್ಷಣೆಯನ್ನು ಹೊಸ ರಾಜಕೀಯ ಶಕ್ತಿಗಳ ಉಗಮದ ಪ್ರಸವವೇದನೆ ಎಂದು ಕಾಂ. ಇ.ಎಂ.ಎಸ್. ಬಣ್ಣಿಸಿದರು, ಆರ್.ಎಸ್.ಎಸ್. ಮತ್ತು ಸಿ.ಪಿ.ಐ. (ಎಂ) ನಡುವಿನ ಘರ್ಷಣೆಗಳು ಈಗ ಅಂತ್ಯಗೊಂಡಿದ್ದು ಅದೊಂದು ಸತ್ತ ಕುದುರೆಯಾಗಿದೆ, ಸತ್ತುಹೋಗಿರುವ ಕುದುರೆಯನ್ನು ಮತ್ತೆ ಒದ್ದು ಎಬ್ಬಿಸಲು ಪ್ರಯತ್ನಪಡಬೇಡಿ ಎಂದು ಪತ್ರಕರ್ತರನ್ನು ಇ.ಎಂ.ಎಸ್. ಕೇಳಿಕೊಂಡರು.

ನಾವೇ ಮೊದಲಿಗರಲ್ಲ

ಬಂದ್, ಮುಷ್ಕರಗಳನ್ನು ಆಡಳಿತದಲ್ಲಿರುವ ಸರ್ಕಾರಗಳೇ ಸಂಘಟಿಸುವುದು ಉಚಿತವೇ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರ ನೀಡಿದ ಸಿ. ಪಿ ಐ (ಎಂ) ಕಾರ್ಯದರ್ಶಿಗಳು, ಈ ವಿಷಯದಲ್ಲಿ ತಾವೇ ಮೊದಲಿಗರೇನು ಅಲ್ಲ ಎಂದರು. ಬಂಗಾಳದ ಪ್ರಥಮ ಮುಖ್ಯಮಂತ್ರಿ ಡಾ. ಬಿ. ಸಿ ರಾಯ್ ಅವರು ಆಡಳಿತ ನಡೆಸುವಾಗ 'ಬಂಗಾಳ ಬಂದ್' ವ್ಯವಸ್ಥೆ ಮಾಡಿದ್ದರು. 1957ರಲ್ಲಿ ಅಂದಿನ ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಗಾಂಧಿ ಅವರು ತಮ್ಮ ಸಂಪುಟವನ್ನು ವಜಾ ಮಾಡಲು 'ಕುಖ್ಯಾತ ವಿಮೋಚನಾ ಸಮರ'ವನ್ನು ವ್ಯವಸ್ಥೆ ಮಾಡಿರಲಿಲ್ಲವೆ? ಎಂದು ಇ.ಎಂ ಎಸ್. ಪ್ರಶ್ನಿಸಿ, ಅಸ್ಸಾಂ ಚಳುವಳಿ ವಿಷಯದಲ್ಲಿ ಆಡಳಿತರೂಢ ಕಾಂಗ್ರೆಸ್ ಪಕ್ಷವು ಪ್ರತಿಪಕ್ಷಗಳು ವ್ಯವಸ್ಥೆ ಮಾಡಿದ್ದ 'ಪಶ್ಚಿಮ ಬಂಗಾಳ ಬಂದ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿತ್ತು ಎಂದು ಉತ್ತರಿಸಿದರು.

ವಿರೋಧ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳಿಗೆ ಕೇಂದ್ರಸರ್ಕಾರವು ತೋರಿಸುತ್ತಿರುವ ಮಲತಾಯಿ ಧೋರಣೆ, ಬೆಲೆಏರಿಕೆ ಮುಂತಾದ ವಿಷಯಗಳ ಬಗ್ಗೆ ಜನತೆಗೆ ತಿಳುವಳಿಕೆಕೊಡಲು, ಹಣದುಬ್ಬರ ತಡೆಗಟ್ಟುವುದು, ಬೆಲೆಗಳನ್ನು ನಿಯಂತ್ರಿಸುವುದು ಕೇಂದ್ರದ ಕೈಯ್ಯಲ್ಲಿರುವ ವಿಚಾರ ಎಂಬ ಸತ್ಯವನ್ನು ಜನತೆಗೆ ಹೇಳಲು 'ಬಂದ್' ಒಂದು ಮಾರ್ಗ; ಅದನ್ನು ನಾವು ಮಾಡುತ್ತಿದ್ದೇವೆ ಎಂದು ಕಾಂ. ಎಂ. ಬಸವಪುನ್ನಯ್ಯ ಹೇಳಿದರು. ಸತ್ಯವನ್ನು ಜನತೆಗೆ ತಿಳಿಸುವುದು ತಪ್ಪಾದರೆ ಆ ತಪ್ಪನ್ನು ನಾವು ಮಾಡುತ್ತಿದ್ದೇವೆ ಎಂದು ಬಸವಪುನ್ನಯ್ಯ ನುಡಿದರು.

ಅಪಾರ ಹಾನಿಗೆ ಒಳಗಾದ ರೈತ

ರಾಷ್ಟ್ರದ ಹಲವು ಕಡೆಗಳಲ್ಲಿ ನಡೆಯುತ್ತಿರುವ ರೈತಚಳುವಳಿಯನ್ನು ತಮ್ಮ ಪಕ್ಷವು ಸಂಪೂರ್ಣವಾಗಿ ಬೆಂಬಲಿಸುವುದು ಎಂದು ಘೋಷಿಸಿದ ಕಾಂ. ಬಸವಪುನ್ನಯ್ಯ ಅವರು, ರೈತರು ಇಟ್ಟಿರುವ ಎಲ್ಲಾ ಬೇಡಿಕೆಗಳು ನ್ಯಾಯಸಮ್ಮತವಾದವುಗಳೇ ಎಂದರು, ನಾನಾ ವಿಧದ ಸಾಲಗಳು, ಹೊರಲಾಗದಷ್ಟು ತೆರಿಗೆಗಳ ಭಾರದಿಂದ ಭಾರತದ ರೈತಾಪಿವರ್ಗ ನಲುಚ್ಚಿದೆ ಎಂದು ನುಡಿದ ಬಸವಪುನ್ನಯ್ಯ ಅವರು, ರೈತರ ಎಲ್ಲಾ ಸಾಲಗಳು ರದ್ದಾಗಬೇಕು ಎಂದರು. ಅಲ್ಲಲ್ಲೇ ಹಂದು ಹಂಚಿಹೋಗಿರುವ ರೈತರನ್ನು ಬಹುಕಾಲದಿಂದ ನಿರ್ಲಕ್ಷಿಸಲಾಗಿದ್ದು, ಈಗ ರೈತರೇ ಸಂಘಟಿತರಾಗುತ್ತಿದ್ದಾರೆ-ಹೋರಾಟಕ್ಕೆ ಇಳಿಯುತ್ತಿದ್ದಾರೆ-ಇದು ಶುಭ ಸೂಚನೆ ಎಂದರು. ಪಟ್ಟಣಗಳಲ್ಲಿ ಕಾರ್ಮಿಕರು ಹೆಚ್ಚು ವೇತನ ಕೇಳುವುದು ಎಷ್ಟು ನ್ಯಾಯಸಮ್ಮತವೋ, 'ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆಕೊಡಿ' ಎಂಬ ರೈತರ ಬೇಡಿಕೆಯು ಅಷ್ಟೇ ನ್ಯಾಯಸಮ್ಮತ ಎಂದು ಬಸವಪುನ್ನಯ್ಯ ಅಭಿಪ್ರಾಯಪಟ್ಟರು.

ಹೆಚ್ಚು ವೇತನ ಹೆಚ್ಚು ಬೆಲೆಸಾಧ್ಯ

ದೇಶದಲ್ಲಿನ ಶ್ರೀಮಂತ ಮನೆಗಳ ಆದಾಯ ಮತ್ತು ದೊಡ್ಡದೊಡ್ಡ ಅಧಿಕಾರಿಗಳ ಸಂಬಳ ಭತ್ಯೆಗಳಲ್ಲಿ ಕಡಿತಮಾಡಿದರೆ ಕಾರ್ಮಿಕವರ್ಗಕ್ಕೆ ಹೆಚ್ಚು ಕೂಲಿಯನ್ನೂ ಮತ್ತು ರೈತರಿಗೆ ಲಾಭದಾಯಕ ಬೆಲೆಯನ್ನೂ ಕೊಡಲು ಸಾಧ್ಯವಿದೆ ಎಂದು ಕಾಂ. ಇ.ಎಂ.ಎಸ್. ಹಾಗೂ ಕಾಂ. ಬಸವಪುನ್ನಯ್ಯ ಹೇಳಿದರು.

○

ಬ್ರೆಜ್ನೇವ್‌ರವರಿಗೆ ಸುಸ್ವಾಗತ

(1ನೇ ಪುಟದಿಂದ)

ಒಕ್ಕೂಟ, ಭಾರತವನ್ನು ಬೆಂಬಲಿಸಿದೆ 1965 ರಲ್ಲಿ ಭಾರತ - ಪಾಕಿಸ್ತಾನ ಯುದ್ಧವಾದಾಗಲೂ ಸೋವಿಯೆತ್ ಒಕ್ಕೂಟ ಅಪಾಯವನ್ನು ತಪ್ಪಿಸಿದೆ. ತಾಷ್ಕೆಂಟ್ ಸಮ್ಮೇಳನವನ್ನು ಏರ್ಪಡಿಸಿದೆ.

ಬಾಂಗ್ಲಾ ಹೋರಾಟ, ಪಾಕಿಸ್ತಾನದ ಕದನ ಸಂಭವಿಸಿದಾಗ ಭಾರತ ಸೋವಿಯೆತ್ ಸಹಕಾರ ಅಪಾಯ ತಪ್ಪಿಸಿದೆ. ಬಾಂಗ್ಲಾಕ್ಕೆ ಬೆಂಬಲ ಕೊಡಲು ಸಹಾಯ ಮಾಡಿದೆ. ಇದರಿಂದ ಅಮೆರಿಕದ ವಿಕೃತ ಯೋಜನೆಗಳಿಗೆ ಕೊಡಲಿಪೆಟ್ಟು ಬಿದ್ದಿತು.

ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚಿನಿಂದಲೂ ಭಾರತ-ಸೋವಿಯೆತ್ ಜನರ ಸಂಬಂಧಗಳು ಬೆಳೆದಿವೆ, ಮಹಾನ್ ಅಕ್ಟೋಬರ್ ಕ್ರಾಂತಿ ಮತ್ತು ವಿಮೋಚನೆಗೆ ಹೋರಾಡುವ ಎಲ್ಲ ಜನರಿಗೆ ಬೆಂಬಲ ನೀಡುವ ಲೆನಿನ್ನರ ಪ್ರತಿಜ್ಞೆ ಇವು ಭಾರತದ ಜನತೆ ಮತ್ತು ಸ್ವಾತಂತ್ರ್ಯದ ಹೋರಾಟದ ಮೇಲೆ ಅಗಾಧ ಪರಿಣಾಮ ಬೀರಿದೆ.

ಆಳುವವರ್ಗಗಳ ವಿರುದ್ಧ ರಕ್ಷಣೆಗಾಗಿ ಹೋರಾಟ, ಪ್ರಜಾಪ್ರಭುತ್ವದ ವಿಸ್ತರಣೆಗೆ, ಕಾರ್ಮಿಕವರ್ಗದ ಬೇಡಿಕೆಗಳ ಈಡೇರಿಕೆಗೆ, ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ಭಾರತ ಕೈಗೊಳ್ಳಲು ನಡೆಸುವ ಹೋರಾಟಗಳು ಎರಡು ದೇಶಗಳ ಸಹಕಾರ ದೃಢಗೊಳ್ಳುವುದರಲ್ಲಿ ಸಹಾಯ ಮಾಡುತ್ತವೆ. ಬ್ರೆಜ್ನೇವ್ ಭೇಟಿಯಿಂದ ಇದಕ್ಕೆ ಸಹಾಯವಾಗಿದೆ, ಸಾಮ್ರಾಜ್ಯಶಾಹಿ ಪಿತೂರಿಯನ್ನು ಎದುರಿಸಲು ಹೊಸ ಸ್ಫೂರ್ತಿಯನ್ನಿತ್ತಿದೆ. ●

ಅಸ್ಸಾಂ ಚಳವಳಿಯ ನಿಜಸ್ವರೂಪ

(7ನೇ ಪುಟದಿಂದ)

ದಿಂದ ಬಂದ ನಿರಾಶ್ರಿತರು ಶತ್ರುಗಳಲ್ಲ. ಅವರು ಕೂಡ ಶೋಷಣೆಗೊಳಗಾದವರು ಎಂದು ತಿಳಿಸಿದರು. ಈ ಸಮಸ್ಯೆಗಳು ಕೇವಲ ಅಸ್ಸಾಮಿಗಳಿಗೆ ಸೀಮಿತವಾಲ್ಲ, ದೇಶದ ಇತರೆಡೆಯಲ್ಲಿಯೂ ಇವೆ ಆದುದರಿಂದ ಕೇವಲ ಒಂದು ಜಾತಿ. ಪ್ರಾಂತವನ್ನು ಹಿಡಿದುಕೊಂಡು ಹೋರಾಡದೆ ನಮ್ಮ ಯುವಜನರು, ವಿದ್ಯಾರ್ಥಿಗಳು, ವಿಚಾರವಂತರಾಗಿ ಒಗ್ಗಟ್ಟಾಗಿ, ಬಂಡವಾಳಶಾಹಿಗಳ ಭೂಮಾಲೀಕ ಜಾತಿ, ಕೋಮು ಮತ್ತು ಪ್ರಾಂತೀಯ ವಾದಗಳ ವಿರುದ್ಧ ಹೋರಾಡಬೇಕು ಎಂದು ಕರೆಕೊಟ್ಟರು.

ಕಾರ್ಯಕ್ರಮದ ಕೊನೆಯಲ್ಲಿ ವಿಲ್ಫ್ರೆಡ್ (ಡಿ ವೈ ಓ) ಅವರು ವಂದಿಸಿದರು, ನಂತರ ಸಮುದಾಯದ ಗೆಳೆಯರು ಅಭಿನಯಿಸಿದ 'ಬೇನೆ' ನಾಟಕವನ್ನು ಪ್ರದರ್ಶಿಸಲಾಯಿತು. ಶ್ರೀ ಎಸ್. ಎಸ್. ಭಟ್ ಮತ್ತು ಐ. ಕೆ. ಬೊಳುವಾರ್ ಅವರ ನಿರ್ದೇಶನದಲ್ಲಿ ನಾಟಕ ಯಶಸ್ವಿ ಪ್ರಭಾವವನ್ನು ಬೀರಿತು.

ವರದಿ : ವಿಲ್ಫ್ರೆಡ್ ಡಿಸೋಜ

ಸಂಪಾದಕೀಯ

(1ನೇ ಪುಟದಿಂದ)

ಮಾತನಾಡುತ್ತಿದ್ದರು, ಆದರೆ ಇವರೆಲ್ಲ ಈಗ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಪ್ರತ್ಯಕ್ಷ ವಿರೋಧವಾದಿಯೂ ಮತ್ತು ಕಾಂಗ್ರೆಸ್‌ನ ಪರೋಕ್ಷ ಬೆಂಬಲಿಗರಾಗಿ ವರ್ತಿಸುತ್ತಿರುವುದನ್ನು ಕಾಣಬಹುದು.

'75'ರ ಕಾಲದಲ್ಲಿ ಗುಜರಾತ್, ಬಿಹಾರ್‌ಗಳಲ್ಲಿ ಇಂದಿರಾ ಆಡಳಿತವನ್ನು ಕೊನೆಗಾಣಿಸಬೇಕೆಂದು ಜಯಪ್ರಕಾಶ ನಾರಾಯಣರವರ ನೇತೃತ್ವದಲ್ಲಿ ಯುವಜನರು ಆಂದೋಲನ ನಡೆಸುತ್ತಿದ್ದರು. ಅಲಹಾಬಾದ್ ತೀರ್ಪು ಇಂದಿರಾಗೆ ವಿರೋಧವಾಗಿತ್ತು. ಇವೆಲ್ಲಾ ಶ್ರೀಮತಿ ಗಾಂಧಿಯವರ ಆಡಳಿತ ಕೊನೆಗಾಣಿಸುವ ಉದ್ದೇಶಗಳಿದ್ದವು. ಈಗ ದೇಶದಲ್ಲಿ ನಡೆಯುವ ಯಾವ ಚಳುವಳಿಯೂ ಇಂದಿರಾ ಆಡಳಿತ ಕೊನೆಗಾಣಿಸುವುದಕ್ಕಲ್ಲ. ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ಸಮಾವೇಶಗೊಂಡ ಆರು ಪಕ್ಷಗಳ ಸಮ್ಮೇಳನವಂತೂ ಇದನ್ನು ಸ್ಪಷ್ಟಪಡಿಸಿದೆ.

ಈಗ ದೇಶದಲ್ಲಿ ನಡೆಯುತ್ತಿರುವ ರೈತ-ಕಾರ್ಮಿಕ ಚಳುವಳಿಗಳು ದೇಶವನ್ನು ಆಳುವ ಗುತ್ತೇದಾರಿ ಬಂಡವಾಳಶಾಹಿಗಳು ಜನರ ಮೇಲೆ ನಡೆಸುತ್ತಿರುವ ಶೋಷಣೆಗೆ ವಿರೋಧವಾಗಿಯೂ, ಕಾರ್ಮಿಕರ, ರೈತರ ಮತ್ತು ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿಯೂ ಆಗಿದೆ.

ಈ ಚಳುವಳಿಗಳನ್ನು ಎದುರಿಸಲು ಕಾಂಗ್ರೆಸ್‌ನ ಆರ್ಥಿಕ ರಾಜಕೀಯ ಧೋರಣೆಗಳಲ್ಲಿ ಜನಪರ ಬದಲಾವಣೆ ತರುವ ಬದಲು, ಚಳುವಳಿಗಳು ಶ್ರೀಮತಿ ಗಾಂಧಿಯವರನ್ನು ಗದ್ದುಗೆಯಿಂದ ಇಳಿಸುವುದಕ್ಕಲ್ಲವಾಗಿದ್ದರೂ, ಆಡಳಿತವರ್ಗಗಳ ಧೋರಣೆಗಳಿಗೆ ವಿರೋಧವಿರುವುದರಿಂದ, ಗುತ್ತೇದಾರಿ ಬಂಡವಾಳಗಾರರ ಪರವಾದಿ ಆಡಳಿತ ನಡೆಸುವವರಿಗೆ ವಿರೋಧ ಪಕ್ಷಗಳನ್ನು ಜನತೆಯ ಚಳುವಳಿಗಳನ್ನು ಹತ್ತಿಕ್ಕಬೇಕಾಗಿದೆ.

75ರ ಪರಿಸ್ಥಿತಿಯಲ್ಲಿ ಇಂದಿರಾಗಾಂಧಿಗೆ ಕೆಲವರು ಬೆಂಬಲಿಗರಿದ್ದು, ಪ್ರಜಾಪ್ರಭುತ್ವದ ಮುಖವಾಡಹಾಕುವ ಅವಕಾಶವಿದ್ದರೆ ಇಂದು ಆ ಸಾಧ್ಯತೆಯಿಲ್ಲ.

ಜನತೆಯ ಒಗ್ಗಟ್ಟು ಮತ್ತು ಹೋರಾಟಗಳನ್ನು ಬೆಳೆಸಿ, ವಿಶಾಲಗೊಳಿಸುವುದರಿಂದ ಮಾತ್ರ ಸರ್ವಾಧಿಕಾರವನ್ನು ತಡೆಯಲು ಸಾಧ್ಯ. ಈ ಮಹಾನ್ ಧ್ಯೇಯಕ್ಕಾಗಿ ಮುನ್ನಡೆಯೋಣ!

○

ಬೀಡಿ ಕಾರ್ಮಿಕರು ಮುಷ್ಕರದ ದಾರಿಯಲ್ಲಿ

ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳ ಸುಮಾರು 10 ಲಕ್ಷಕ್ಕೂ ಮಿಕ್ಕಿ ಬೀಡಿ ಕಾರ್ಮಿಕರು ಡಿಸೆಂಬರ್ 17ರಂದು ಒಂದು ದಿನದ ಮುಷ್ಕರ ಹೂಡಲಿದ್ದಾರೆ.

ಬೀಡಿ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದ್ದು ಕನಿಷ್ಟ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಮಹಿಳೆಯರೇ ಪ್ರಧಾನವಾಗಿರುವ ಬೀಡಿ ಕೈಗಾರಿಕೆಯಲ್ಲಿ ಅಸಂಘಟಿತರೇ ಹೆಚ್ಚಾಗಿದ್ದು ಈ ಹಿಂದೆಯೂ ತಮ್ಮ ಬೇಡಿಕೆಗೋಸ್ಕರ ಹೋರಾಟ ಮಾಡಿದ್ದರೂ ಸರಕಾರ ಯಾವ ಕ್ರಮ ಕೈಗೊಂಡಿಲ್ಲವೆಂದು ರಾಜ್ಯ ಬೀಡಿ ನೌಕರರ ಫೆಡರೇಶನ್ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಕರ್ನಾಟಕ ಬೀಡಿ ಮಜ್ದೂರ್ ಫೆಡರೇಶನ್ ಅಧ್ಯಕ್ಷ ಶ್ರೀ ಅಜೀಜ್ ಸೇಟ್ ಮತ್ತು ಎ ಐ ಟಿ. ಯು ಸಿ. ಯ ಕಾಂ. ನರಸಿಂಹನ್ ತಿಳಿಸಿದ್ದಾರೆ.

1000 ಬೀಡಿಗೆ 12 ರೂ. ಕೊಡಬೇಕು, ಕಂಟ್ರಾಕ್ಟ್ ಪದ್ಧತಿ ಸಂಪೂರ್ಣ ರದ್ದಾಗಬೇಕು, ಬೀಡಿ ಮತ್ತು ಸಿಗಾರ ಶಾಸನಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು – ಇವೇ ಮುಂತಾದ 12 ಬೇಡಿಕೆಗಳನ್ನು ಮುಂದಿಟ್ಟು ಕಾರ್ಮಿಕರ ಮುಷ್ಕರಕ್ಕೆ ಕರೆ ಕೊಡಲಾಗಿದೆ. 17ರಂದು ರಾಜ್ಯದ ನಾನಾ ಭಾಗದಲ್ಲಿ ಕಾರ್ಮಿಕರು ಮೆರವಣಿಗೆ ನಡೆಸಿ ತಮ್ಮ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯಲು ನಿರ್ಧರಿಸಿದ್ದಾರೆ.

ಈ ಮುಷ್ಕರವನ್ನು ಸಿ ಐ.ಟಿ.ಯು., ಎ.ಐ.ಟಿ ಯು.ಸಿ. ಮತ್ತು ಅಜೀಜ್ ಸೇಟರ ನೇತೃತ್ವದ ಬೀಡಿ ಮಜ್ದೂರ್ ಫೆಡರೇಶನ್ ಸಂಘಟಿಸಿವೆ.

●

ದ.ಕ. ಜಿಲ್ಲಾ ಎಸ್. ಎಫ್.ಐ. ಸಮ್ಮೇಳನ

ಡಿಸೆಂಬರ್ 7 ಮತ್ತು 8 ರಂದು ಮಂಗಳೂರಿನಲ್ಲಿ ಎಸ್. ಎಫ್. ಐ. ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಅಖಿಲ ಭಾರತ ಎಸ್. ಎಫ್ ಐ. ಅಧ್ಯಕ್ಷ ಕಾಂ. ಎಂ ಎ. ಬೇಬಿಯವರು ಸಮ್ಮೇಳನವನ್ನು ಉದ್ಘಾಟಿಸಿದರು,

ವಿವರವಾದ ವರದಿಯನ್ನು ಮುಂದಿನ ವಾರ ನೀಡಲಾಗುವುದು,

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT